UASB LIBRARY
Jai Kisan
Agri Newspaper Clippings
Saturday 18-11-2023
Pg. 1

ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ | ಜಿಕೆವಿಕೆಯಲ್ಲಿ ಕೃಷಿ ಮೇಳ | ಪ್ರಗತಿಪರ ಯೋಜನೆಗಳಿಗೆ ಆದ್ಯತೆ ಅಗತ್ಯ

ಸಂಶೋಧನೆ, ಆವಿಷ್ಕಾರ ವಿವಿಗಳ ಧ್ಯೇಯವಾಗಲಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕೃಷಿ ವಿಶ್ವವಿದ್ಯಾಲಯಗಳು ಪದವೀಧರರನ್ನು ತಯಾರಿಸಲಷ್ಟೇ ಸೀಮಿತವಾಗದೆ ಸಂಶೋಧನೆ, ತಂತ್ರಜ್ಞಾನ ಮೇಲ್ದರ್ಜೆ ಹಾಗೂ ನವೀನ ಆವಿಷ್ಕಾರ ವಿಷಯಗಳತ್ತ ಹೆಚ್ಚಿನ ಗಮನ ಹರಿಸಬೇಕು. ಇವುಗಳನ್ನು ಸಕಾಲದಲ್ಲಿ ಕೃಷಿಕರಿಗೆ ತಲುಪಿಸಲು ವಿವಿಗಳು ರೈತಪರ ಯೋಜನೆಗಳಿಗೆ ಆದ್ಯತೆ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.

ಬೆಂಗಳೂರು ಕೃಷಿ ವಿವಿ ಕ್ಯಾಂಪಸ್ ಜಿಕೆವಿಕೆಯಲ್ಲಿ ಶುಕ್ರವಾರ ಆರಂಭವಾದ 4 ದಿನಗಳ ವಾರ್ಷಿಕ ಕೃಷಿಮೇಳ ಉದ್ಘಾಟಿಸಿ, ಪ್ರಗತಿಪರ ರೈತರಿಗೆ ಕೃಷಿ ಪ್ರಶಸ್ತಿಗಳನ್ನು ವಿತರಿಸಿ ಮಾತನಾಡಿದರು. ಬೆಂಗಳೂರು ಕೃಷಿ ವಿವಿ 6 ದಶಕಗಳಿಂದ ರಾಜ್ಯದ ರೈತರಿಗೆ ಕೃಷಿ ಆವಿಷ್ಕಾರ ಹಾಗೂ ತಂತ್ರಜ್ಞಾನಗಳನ್ನು ತಲುಪಿಸುವಲ್ಲಿ ನಿರತವಾಗಿದೆ. ವಿವಿಯಲ್ಲಾಗುವ ಸಂಶೋಧನೆ, ಹೊಸ ತಳಿಗಳು, ಮಣ್ಣಿನ ಫಲವತ್ತತೆಯ ವಿಧಾನಗಳನ್ನು ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ಕೃಷಿಕರಿಗೆ ತಿಳಿಸುವ ಕೆಲಸ ಆಗಬೇಕಿದೆ. ವಿವಿಗಳು ಕೇವಲ ಕೃಷಿ ಪದವೀಧರರನ್ನು ತಯಾರು ಮಾಡುವ ಜತೆಗೆ ಹೆಚ್ಚು ಹೆಚ್ಚು ಸಂಶೋಧನೆ ನಡೆಸಬೇಕು. ಈ ಕಾರ್ಯಕ್ಕೆ ಸರ್ಕಾರ ಹಣಕಾಸಿನ ನೆರವು ನೀಡಲು ಸಿದ್ಧವಿದೆ. ಮುಖ್ಯವಾಗಿ ಕೃಷಿ ಲಾಭದಾಯಕ ಮಾಡುವ ವಿಧಾನಗಳನ್ನು ರೈತರಿಗೆ ತಲುಪಿಸಿದಾಗ ಮಾತ್ರ ಈಗಿನ ಪೀಳಿಗೆಯ ರೈತ ಮಕ್ಕಳು ಕೃಷಿ ಕಸುಬನ್ನು ಮುಂದುವರಿಸುತ್ತಾರೆ. ಇಲ್ಲವಾದಲ್ಲಿ ಕೃಷಿಯಿಂದ ವಿಮುಖವಾಗಿ ಆಹಾರಕ್ಕಾಗಿ ಹಾಹಾಕಾರ ಏಳುವ ಪರಿಸ್ಥಿತಿ ನಿರ್ಮಾಣವಾಗಬಹುದು ಎಂದು ಸಿಎಂ ಎಚ್ಚರಿಸಿದರು.

» ಹಣಕಾಸಿನ ನೆರವು ನೀಡಲು ಸರ್ಕಾರ ಸಿದ್ಧ

» ಕೃಷಿಯನ್ನು ಲಾಭದಾಯಕ ಮಾಡುವುದು ಇಂದಿನ ಅಗತ್ಯ

ಕಡಿಮೆ ನೀರು ಹೀರುವ ತಳಿ ರೂಪಿಸಿ: ಕೃಷಿ ವಿವಿಗಳು ಸಾಂಪ್ರದಾಯಿಕ ತಳಿಗಳಲ್ಲದೆ ಕಡಿಮೆ ನೀರು ಬಯಸುವ ಹಾಗೂ ರೋಗನಿರೋಧಕ ಶಕ್ತಿ ಹೆಚ್ಚಿರುವಂತೆ ಹೊಸ ತಳಿಗಳನ್ನು ಅಭಿವೃದ್ಧಿಪಡಿಸಬೇಕು. ಹವಾಮಾನ ವೈಪರೀತ್ಯದಿಂದಾಗಿ ಬರಗಾಲ ಉಂಟಾದಾಗ ರೈತರು ಕೃಷಿ ಮುಂದುವರಿಸಲು ವಿವಿಗಳು ಆಸರೆಯಾಗಿ ನಿಲ್ಲಬೇಕು. ಪ್ರಸ್ತುತ ರಾಜ್ಯದ 223 ತಾಲೂಕುಗಳಲ್ಲಿ ಬರ ಇದ್ದು, ಶೇ.90 ಪ್ರದೇಶ ಬರಪೀಡಿತವಾಗಿದೆ. ಸರ್ಕಾರ ಸಹಾಯಧನ ನೀಡಿದರೂ, ಬೆಳೆ ನಷ್ಟವನ್ನು ತುಂಬಿಕೊಡಲು ಸಾಧ್ಯವಿಲ್ಲ. ಸುಮಾರು 33 ಸಾವಿರ ಕೋಟಿ ರೂ. ನಷ್ಟವಾಗಿದ್ದು, ಎನ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ 17,900 ಕೋಟಿ ರೂ. ಪರಿಹಾರ ಕೋರಲಾಗಿದೆ. ಇದನ್ನು ಹೊರತುಪಡಿಸಿ 16 ಸಾವಿರ ಕೋಟಿ ರೂ. ಮೌಲ್ಯದಷ್ಟು ಬೆಳೆ ರೈತರಿಗೆ ನಷ್ಟವಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ರೈತರ ರಕ್ಷಣೆಗೆ ಸರ್ಕಾರದ ಜತೆಗೆ ವಿವಿಗಳು ಜವಾಬ್ದಾರಿ ಹೊರಬೇಕಿದೆ ಎಂದು ಕೃಷಿ ವಿಜ್ಞಾನಿಗಳಿಗೆ ಸಿಎಂ ಕಿವಿಮಾತು ಹೇಳಿದರು.

ಹೊಸ ತಳಿ, ತಾಂತ್ರಿಕತೆ ಲೋಕಾರ್ಪಣೆ: ಇದೇ ವೇಳೆ ಮುಖ್ಯಮಂತ್ರಿಯವರು ಕೃಷಿ ವಿವಿ ಅಭಿವೃದ್ಧಿಪಡಿಸಿರುವ 5 ಹೊಸ ತಳಿಗಳು ಹಾಗೂ ಕೆಲ ನವೀನ ತಾಂತ್ರಿಕತೆಯನ್ನು ಲೋಕಾರ್ಪಣೆ ಮಾಡಿದರು. ಮಣ್ಣು ಪರೀಕ್ಷೆ ಹಾಗೂ ಬೆಳೆ ಸ್ಥಾಪನೆ ಪ್ರಾಯೋಜನೆ ಆಡಿಯಲ್ಲಿ ಅಭಿವೃದ್ಧಿಪಡಿಸಿರುವ 'ಧರ್ತಿಮಿತ್ರ' ವೆಬ್ ಹಾಗೂ ಮೊಬೈಲ್ ಅಪ್ಲಿಕೇಷನ್ ಸಾಫ್ಟ್‌ವೇರ್ ಅನ್ನು ಬಿಡುಗಡೆ ಮಾಡಿದರು.

ಕಾರ್ಯಕ್ರಮದಲ್ಲಿ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕ ಶರತ್ ಬಚ್ಚೇಗೌಡ, ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ.ಸುರೇಶ್, ವಿಸ್ತರಣಾ ನಿರ್ದೇಶಕ ಡಾ. ವಿ.ಎಲ್.ಮಧುಪ್ರಸಾದ್, ಡಾ. ಕೆ.ಸಿ. ನಾರಾಯಣಸ್ವಾಮಿ, ಡಾ. ವೆಂಕಟೇಶ್ ಮತ್ತಿತರರಿದ್ದರು.



ಚಿತ್ರಗಳು: ರಾಘವೇಂದ್ರ ಸಿ.

ಕೃಷಿ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದವರಿಗೆ ಜಿಕೆವಿಕೆಯಲ್ಲಿ ಶುಕ್ರವಾರ ಆಯೋಜಿಸಿದ್ದ ಕೃಷಿಮೇಳದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಕೃಷಿ ಸಚಿವ ಚಲುವರಾಯಸ್ವಾಮಿ, ಶಾಸಕ ಶರತ್ ಬಚ್ಚೇಗೌಡ, ವಿವಿ ಕುಲಪತಿ ಡಾ. ಎಸ್.ವಿ. ಸುರೇಶ ಮತ್ತಿತರರಿದ್ದರು.

ರೈತರಿಗೆ ಹೊಸ ತಳಿಗಳು, ಹೊಸ ಔಷಧ, ಮಣ್ಣಿನ ಫಲವತ್ತತೆ, ನ್ಯಾಯಯುತ ಬೆಲೆ, ಆಹಾರ ಸಂಗ್ರಹಣೆಗೆ ಗೋದಾಮುಸಹಿತ ಕೃಷಿ ಪೂರಕ ವಾತಾವರಣ ನಿರ್ಮಿಸಿಕೊಟ್ಟಾಗ ಮಾತ್ರ ಸುಸ್ಥಿರವಾದ ಕೃಷಿ ಬೆಳವಣಿಗೆ ಸಾಧ್ಯ. ಇದನ್ನು ಪ್ರತಿಪಾದಿಸಿದ್ದ ಡಾ. ಸ್ವಾಮಿನಾಥನ್ ಚಿಂತನೆಗಳನ್ನು ಕಾರ್ಯರೂಪಕ್ಕೆ ತರಲು ಎಲ್ಲರೂ ಒಟ್ಟಾಗಿ ಶ್ರಮಿಸಬೇಕು.

| ಸಿದ್ದರಾಮಯ್ಯ ಮುಖ್ಯಮಂತ್ರಿ

ಒಕ್ಕಲುತನ ಮಾಡುವವರಿಗೆ ಯಾವುದೇ ಜಾತಿ, ಧರ್ಮದ ಕಟ್ಟುಪಾಡು ಇಲ್ಲ. ರೈತರಿಗೆ ಯಾವುದೇ ವೇತನ, ಪಿಂಚಣಿ ಸೌಲಭ್ಯವೂ ಇಲ್ಲ. ಸದಾ ಕಷ್ಟದಲ್ಲೇ ಕೃಷಿ ಕಾಯಕ ನಡೆಸುವ ಅನ್ನದಾತರಿಗೆ ರಾಜ್ಯ ಸರ್ಕಾರ ಎಲ್ಲ ರೀತಿಯ ನೆರವು ನೀಡಲಿದೆ. ಏನೇ ಕಷ್ಟ ಬಂದರೂ ಕೃಷಿ ಜಮೀನನ್ನು ಮಾರಾಟ ಮಾಡದೆ ಜೋಪಾನ ಮಾಡಿಕೊಂಡು ಮುಂದಿನ ತಲೆಮಾರಿಗೆ ಹಸ್ತಾಂತರಿಸಿರಿ.

| ಡಿ.ಕೆ. ಶಿವಕುಮಾರ್ ಡಿಸಿಎಂ

ಸಾಧಕ ರೈತರಿಗೆ ಪ್ರಶಸ್ತಿ ಪ್ರದಾನ

ಕೃಷಿಯಲ್ಲಿ ಸಾಧನೆ ಮಾಡಿರುವ ಐವರು ಪ್ರಗತಿಪರ ರೈತರಿಗೆ 2023ನೇ ಸಾಲಿನ ಅತ್ಯುತ್ತಮ ರೈತ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಪ್ರಶಸ್ತಿಯನ್ನು ದೇವನಹಳ್ಳಿ ತಾಲೂಕಿನ ಬೀಡಿಗಾನಹಳ್ಳಿಯ ಬಿ.ಆರ್.ಮಂಜುನಾಥ್‌ಗೆ ವಿತರಿಸಲಾಯಿತು. ಶಿವಮೊಗ್ಗದ ತಾಳಗುಪ್ಪ ಹೋಬಳಿ ಎಚ್.ಟಿ. ರಾಜೇಂದ್ರಗೆ ಡಾ. ಎಂ.ಎಚ್. ಮರೀಗೌಡ ಅತ್ಯುತ್ತಮ ತೋಟಗಾರಿಕೆ ರೈತ ಪ್ರಶಸ್ತಿ, ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ಬಿ.ಜಿ. ಮಂಜೇಗೌಡಗೆ ಡಾ. ಆರ್.ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ ಹಾಗೂ ಕೆನರಾ ಬ್ಯಾಂಕ್ ಪ್ರಾಯೋಜಿತ ಅತ್ಯುತ್ತಮ ರೈತ ಪ್ರಶಸ್ತಿಯನ್ನು ರಾಮನಗರದ ಬಿ.ಪಿ.ವಾಸು ಹಾಗೂ ಶ್ರೀನಿವಾಸಪುರ ತಾಲೂಕಿನ ಎ.ವಿ. ರತ್ನಮ್ಮ ಅವರಿಗೆ ಪ್ರದಾನ ಮಾಡಲಾಯಿತು.

ಬಹುಬೆಳೆ ಪದ್ಧತಿ ಸೂಕ್ತ

ಪ್ರಸ್ತುತ ಜನರಲ್ಲಿ ಆರೋಗ್ಯ ದೃಷ್ಟಿಯಿಂದ ಸಿರಿಧಾನ್ಯಗಳನ್ನು ಹೆಚ್ಚಾಗಿ ಬಳಸುತ್ತಿದ್ದಾರೆ. ಈ ಬೇಡಿಕೆಯನ್ನು ಪೂರೈಸಲು ರೈತರು ಸಿರಿಧಾನ್ಯಗಳನ್ನು ಬೆಳೆಸಲು ಜಾಗೃತಿ ಮೂಡಿಸಬೇಕು. ಇದಕ್ಕೆ ಸರ್ಕಾರ ಕೂಡ ಒತ್ತಾಸೆಯಾಗಿ ನಿಲ್ಲಲಿದೆ. ರೈತರ ಮನವಿಯಂತೆ ಕೃಷಿ ಭಾಗ್ಯ ಯೋಜನೆಯನ್ನು ಪುನಃ ಜಾರಿ ಮಾಡಲಾಗಿದೆ. ಹೊಸ ತಳಿಗಳನ್ನು ಬೆಳೆಯುವ ಮೂಲಕ ಬೇಸಾಯಗಾರರಿಗೆ ಅಧಿಕ ಫಸಲು ದೊರೆಯುತ್ತದೆ. ಬಹುಬೆಳೆಗಳನ್ನು ಬೆಳೆಯುವ ಪ್ರವೃತ್ತಿಯನ್ನು ರೈತರು ಮೈಗೂಡಿಸಿಕೊಳ್ಳಬೇಕು ಎಂದು ಸಿಎಂ ಹೇಳಿದರು.

ರಸಗೊಬ್ಬರಗಳ ಶಿಫಾರಸ್ಸಿಗೆ ಧರ್ತಿಮಿತ್ರ ಆ್ಯಪ್



ಬೆಂಗಳೂರು: ಮಣ್ಣು ಪರೀಕ್ಷೆ ಮೂಲಕ ಫಲವತ್ತತೆಗೆ ಅನುಗುಣವಾಗಿ ಆಗತ್ಯ ರಸಗೊಬ್ಬರಗಳನ್ನು ಹಾಕಿದರೆ ಮಾತ್ರ ಮಣ್ಣಿನ ಆರೋಗ್ಯ ಹಾಗೂ ಸುಸ್ಥಿತ ಇಳುವರಿ ಪಡೆಯಲು ಸಾಧ್ಯವಾಗುತ್ತದೆ. ತಂತ್ರಜ್ಞಾನ ಯುಗದಲ್ಲಿ ಮೊಬೈಲ್ ಆ್ಯಪ್ ಬಳಸಿಕೊಂಡು ಮಣ್ಣಿನ ಫಲವತ್ತತೆ ಹಾಗೂ ಬೆಳೆಗೆ ಅಗತ್ಯವಿರುವ ಪೋಷಕಾಂಶಗಳನ್ನು ತಿಳಿದುಕೊಳ್ಳಬಹುದಾಗಿದೆ.

» ಲೋಕಾರ್ಪಣೆ ಮಾಡಿದ ಸಿದ್ದರಾಮಯ್ಯ

ಹೌದು, ಅಖಿಲ ಭಾರತ ಸುಸಂಘಟಿತ ಮಣ್ಣು ಪರೀಕ್ಷೆ ಮತ್ತು ಬೆಳೆ ಸ್ಥಾಪನೆ ಸಹಕಾರದೊಂದಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ 'ಧರ್ತಿಮಿತ್ರ' ಎಂಬ ವೆಬ್‌ಸೈಟ್ ಮತ್ತು ಮೊಬೈಲ್ ಆ್ಯಪ್‌ನ್ನು ಅಭಿವೃದ್ಧಿ ಪಡಿಸಿದೆ. ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳದಲ್ಲಿ ಸಿಎಂ ಸಿದ್ದರಾಮಯ್ಯ ಈ ಆ್ಯಪ್ ಅನ್ನು ಶುಕ್ರವಾರ ಲೋಕಾರ್ಪಣೆಗೊಳಿಸಿದ್ದಾರೆ.

'ಧರ್ತಿಮಿತ್ರ' ಆ್ಯಪ್ ಅನ್ನು ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ಹಾಸನ, ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ರಾಮನಗರ ಜಿಲ್ಲೆಗಳಿಗೆ ಅಭಿವೃದ್ಧಿಪಡಿಸಲಾಗಿದೆ. ಆ್ಯಪ್‌ನಲ್ಲಿ ಸ್ಥಳದ ಭೌಗೋಳಿಕ ನಿರ್ದೇಶಾಂಕಗಳು ಅಥವಾ ರೈತರ ಹೊಲದ ಸರ್ವೇ ಸಂಖ್ಯೆಯನ್ನು ನಮೂದಿಸಿದಾಗ ಮಣ್ಣಿನಲ್ಲಿರುವ ಪೋಷಕಾಂಶಗಳ ಮಾಹಿತಿ, ಎಸ್‌ಟಿಸಿಆರ್ ಆಧಾರಿತ ರಸಗೊಬ್ಬರಗಳ ಶಿಫಾರಸ್ಸಿನ ಪ್ರಮಾಣ ಹಾಗೂ ಸಮೀಕರಣಗಳಿಲ್ಲದ ಬೆಳೆಗಳಿಗೆ ಕಡಿಮೆ- ಮಧ್ಯಮ- ಹೆಚ್ಚು (ಎಲ್‌ಎಂಎಚ್) ವಿಧಾನದಲ್ಲಿ ರಸಗೊಬ್ಬರಗಳ ಶಿಫಾರಸ್ಸಿನ ಪ್ರಮಾಣದ ವರದಿ ಲಭ್ಯವಾಗುತ್ತದೆ.

ಭೌಗೋಳಿಕ ನಿರ್ದೇಶಾಂಕಗಳ ಆಧಾರದ ಮೇಲೆ ಪ್ರತಿ 100 ಮೀ. ಅಂತರದಲ್ಲಿ ಜಿಲ್ಲೆಗಳಾದ್ಯಂತ ವಿಭಿನ್ನ ಮಣ್ಣು ಪರೀಕ್ಷಾ ವರದಿಯನ್ನು ಆ್ಯಪ್ ಸಹಾಯದಿಂದ ಪಡೆಯಬಹುದು. ಇದರಿಂದಾಗಿ ಹಲವು ಬಾರಿ ಮಣ್ಣಿನ ಮಾದರಿ ಸಂಗ್ರಹಣೆ ಮತ್ತು ವಿಶ್ಲೇಷಣೆ ಮಾಡಬೇಕಾಗುವ ಸಮಯ, ವೆಚ್ಚವನ್ನು ಉಳಿಸಬಹುದು. ಆ್ಯಪ್‌ನ ತಂತ್ರಾಂಶದಲ್ಲಿ ಮಣ್ಣು ಪರೀಕ್ಷೆ ಆಧಾರದ ಮೇಲೆ ರಸಗೊಬ್ಬರಗಳ ಶಿಫಾರಸ್ಸನ್ನು ಮಾಡಲಾಗಿದ್ದು ಸುಸ್ಥಿರ ಕೃಷಿ ಮತ್ತು ಮಣ್ಣಿನ ಫಲವತ್ತತೆಯ ಮಾಹಿತಿ ಸಿಗುತ್ತದೆ.

ಹಳ್ಳಿಕಾರ್ ಹೋರಿ, ಉದ್ದ ಕಿವಿಯ ಮೇಕೆ!

ಜನಾಕರ್ಷಣೆಯ ಕೇಂದ್ರಬಿಂದು | ದೇಸಿ, ವಿದೇಶಿ ತಳಿಗಳ ಕಂಡು ಬೆರಗಾದ ಜನರು

■ ರಾವು ಶಿತನ್ ಕೆ.ವಿ. ಬೆಂಗಳೂರು

ಜಬರ್ದಸ್ತಾಗಿರುವ ಹಳ್ಳಿಕಾರ್ ಹೋರಿ.. ಜರ್ಮನಿಯಿಂದ ತರಿಸಿದ ಮೊಲ.. ಶಿವಾಜಿನಗರದಿಂದ ಬಂದಿದ್ದ ಉದ್ದ ಕಿವಿಯ ಮೇಕೆ.. ಗುಜರಾತ್ ಮೂಲದ ಗಿರ್ ತಳಿಯ ಹಸು... ಈ ಬಾರಿಯ ಕೃಷಿಮೇಳದಲ್ಲಿ ಪ್ರಮುಖ ಜನಾಕರ್ಷಣೆಯ ಕೇಂದ್ರಬಿಂದುವಾಗಿವೆ. ಹಳ್ಳಿಕಾರ್ ತಳಿಯ ಎತ್ತುಗಳನ್ನು ನೋಡಲು ಜನರು ಮುಗಿಬೀಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.



ದೇಶದ ಗೋ ಪರಂಪರೆಯಲ್ಲಿ ವಿಶಾಕದ ಅಂಚಿನಲ್ಲಿರುವ ತಳಿಗಳಲ್ಲಿ ಹಳ್ಳಿಕಾರ್ ಕೂಡ ಒಂದು. ಈ ತಳಿಯ ಉಪಾಸಕರು ಯದುವಂಶ ಪಂಗಡಕ್ಕೆ ಸೇರಿದ ಯದುವಂಶಿ ಹಳ್ಳಿಕಾರ ಸಮುದಾಯ. ಈ ಸಮುದಾಯದ ಹೆಸರಿನಿಂದಲೇ ಗುರುತಿಸಿಕೊಂಡ ಈ ತಳಿ ಭಾರತದ ಗೋ ತಳಿಗಳಲ್ಲಿರುವ ಮೂಲ ವಿಭಾಗಗಳಲ್ಲಿ ಹಳ್ಳಿಕಾರ್ ಅಪ್ಪಟ ಕೆಲಸಗಾರ ತಳಿಯಾಗಿದೆ.

ಮಾಜಿ ಶಾಸಕ ಮಾಸಾಲ ಜಯರಾಮ್ ಹಾಗೂ ಬಿಗ್‌ಬಾಸ್ ಸ್ಪರ್ಧಿ ವತ್ತೂರು ಸಂತೋಷ್ ಅವರಿಗೆ ಸೇರಿದ ಹಳ್ಳಿಕಾರ್ ಹೋರಿಗಳು ಮೇಳದಲ್ಲಿವೆ. ಹೋರಿ ದಿನದ 24 ಗಂಟೆಯೂ ಕೆಲಸ ಮಾಡುವ ಶಕ್ತಿ ಹೊಂದಿದ್ದು, ಅಪ್ಪಟ ಕೆಲಸಗಾರ ಎಂದು ಗುರುತಿಸಿಕೊಂಡಿದೆ. ಅಂದಾಜು 14 ಟನ್‌ನಷ್ಟು ಭಾರವನ್ನು ಎಳೆಯಬಲ್ಲ ಸಾಮರ್ಥ್ಯವನ್ನು ಹೊಂದಿವೆ. ಹೀಗಾಗಿ ಜನರು ಕೂಡ ಈ ಎತ್ತುಗಳ ಬಗ್ಗೆ ಸಾಕಷ್ಟು ಕುತೂಹಲ ಹೊಂದಿದ್ದಾರೆ. ಪ್ರಸ್ತುತ ಹಳ್ಳಿಕಾರ್ ತಳಿಯ ಎತ್ತುಗಳಿಗೆ ಬೇಡಿಕೆ ಹೆಚ್ಚಿದೆ. ಕೃಷಿ ಮೇಳದಲ್ಲಿದ್ದ ಎತ್ತುಗಳು ಲಕ್ಷಾಂತರ ರೂಪಾಯಿ ಬಾಳುವಂತವುಗಳಾಗಿವೆ. ಜತೆಗೆ ದೇಸಿ ಹಸುಗಳಲ್ಲಿ ಹೆಚ್ಚು ರೋಗನಿರೋಧಕ ಶಕ್ತಿ ಹೊಂದಿರುವ ಗುಜರಾತ್ ಮೂಲದ ಗಿರ್ ತಳಿಯ ಹಸುಗಳು ಕೂಡ ಜನರ ಗಮನಸೆಳೆದವು.

ಅಚ್ಚರಿ ಮೂಡಿಸುವ ಜರ್ಮನ್ ಮೊಲ!



ಯೆಲಹಂಕದ ಚಂದನ್ ಎಂಬುವರು ಜರ್ಮನಿಯಿಂದ ತರಿಸಿಕೊಂಡಿರುವ 'ಜರ್ಮನ್ ಅಂಗೋರಾ' ತಳಿಯ ಮೊಲವನ್ನು ಕೃಷಿ ಮೇಳದಲ್ಲಿ ಇರಿಸಲಾಗಿದೆ. ಇದು ಮೊಲ ಹೌದೋ ಆಲ್ಪಾಕೋ ಎಂದು ಜನರು ಪ್ರಶ್ನಿಸುತ್ತಿದ್ದ ದೃಶ್ಯ ಕಂಡುಬಂತು. ಈ ಮೊಲಗಳು 5ರಿಂದ 7 ಕೆ.ಜಿ. ತೂಕ ಹೊಂದಿದ್ದು, 5ರಿಂದ 8 ವರ್ಷ ಜೀವಿತಾವಧಿ ಹೊಂದಿವೆ. ಈ ತಳಿ ಟರ್ಕಿಯ ಅಂಗೋರಾ ಎಂಬ ಪ್ರದೇಶದಲ್ಲಿ ಹುಟ್ಟಿಕೊಂಡಿದೆ. ಜರ್ಮನ್ ಅಂಗೋರಾ ಮೊಲಗಳು ಗತ್ತಿದ್ದಲ್ಲಿ ದೊಡ್ಡದಾಗಿದ್ದು, ಉದ್ದನೆಯ ರೋಮುಗಳನ್ನು ಹೊಂದಿರುತ್ತವೆ.



₹2 ಲಕ್ಷ ಬೆಲೆಯ ಮೇಕೆಗಳು

ಮೇಳದಲ್ಲಿನ ಮತ್ತೊಂದು ವಿಶೇಷವೆಂದರೆ ಉದ್ದನೆಯ ಕಿವಿ ಹೊಂದಿದ್ದ ಮೇಕೆಗಳು. ಕಿವಿಗಳ ಮೂಲಕವೇ ಈ ಮೇಕೆಗಳು ಭಾರೀ ಡಿಮಾಂಡ್ ಸೃಷ್ಟಿಸಿಕೊಂಡಿವೆ. ಬೆಂಗಳೂರು ಭಾಗದಲ್ಲಿರುವ 'ಜಮುನಾಪಾರಿ ಉದ್ದ ಕಿವಿ ತಳಿ'ಯ ಮೇಕೆಗಳು 25-28 ಇಂಚು ಉದ್ದದ ಕಿವಿ ಹೊಂದಿರುತ್ತವೆ. ಶಿವಾನಗರದ ಮೂಲದ ಅಜರುದ್ದೀನ್ ಎಂಬುವರ ತಂಡ ಈ ಮೇಕೆಗಳನ್ನು ಕೃಷಿ ಮೇಳದಲ್ಲಿ ಪ್ರದರ್ಶಿಸಿದೆ. ಇವುಗಳ ಮರಿಗಳೇ ಬರೋಬ್ಬರಿ ರೂ.1.5 ರಿಂದ 2 ಲಕ್ಷ ರೂ. ಬೆಲೆಗೆ ಮಾರಾಟವಾಗುತ್ತವೆ. ಹಾಲು ಮಾರಾಟದ ಉದ್ದೇಶಕ್ಕೂ ಇವು ಜನಪ್ರಿಯವಾಗಿದ್ದು, ಭಾರಿ ಬೇಡಿಕೆ ಇದೆ. ಸಾಮಾನ್ಯವಾಗಿ ಈ ತಳಿಯ ಮೇಕೆಗಳು ಕಂದು, ಕಪ್ಪು ಹಾಗೂ ಬಿಳಿ ಬಣ್ಣದಿಂದ ಕೂಡಿರುತ್ತವೆ. ಕಿವಿ ಉದ್ದವಿದ್ದಷ್ಟೂ ಬೆಲೆ ಜಾಸ್ತಿ ಎಂದು ಹೇಳಲಾಗುತ್ತಿದೆ.

600ಕ್ಕೂ ಅಧಿಕ ಮಳಿಗೆಗಳು

ಕೃಷಿ ಮೇಳದಲ್ಲಿ 600ಕ್ಕೂ ಅಧಿಕ ಮಳಿಗೆಗಳಿದ್ದು, ಕೃಷಿ ಆಸಕ್ತರಿಂದ ಉತ್ತಮ ಸ್ಪಂದನೆ ಮೊದಲಿಯಾಗಿದೆ. ಆದರಲ್ಲೂ ಪಶುಸಂಗೋಪನಾ ವಿಭಾಗದಲ್ಲಿದ್ದ ವಿವಿಧ ಮಳಿಗೆಗಳಿಗೆ ಅಧಿಕ ಸಂಖ್ಯೆಯಲ್ಲಿ ಜನರು ಜನರು ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ.

ಕಬ್ಬಿನ ಸಿಪ್ಪೆಯಿಂದ ಪ್ಲೇಟ್ ತಯಾರಿಕೆ



ಬೆಂಗಳೂರು: ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಪರಿಸರಸ್ನೇಹಿಯಾ ಮಾದರಿಯಲ್ಲಿ ಕಬ್ಬಿನ ಸಿಪ್ಪೆಯಿಂದ ಊಟದ ಪ್ಲೇಟ್, ಕಪ್ ಹಾಗೂ ಬೌಲ್ ತಯಾರಿಸಿರುವ ದಂಪತಿಯ ಯಶೋಗಾಥೆ ಕೃಷಿ ಮೇಳದಲ್ಲಿ ಜನರ ಮೆಚ್ಚುಗೆಗೆ ಪಾತ್ರವಾಗಿದೆ.

ಇಂಥದ್ದೊಂದು ಪ್ರಯತ್ನ ರಾಜ್ಯದಲ್ಲೇ ಮೊದಲ ಬಾರಿಗೆ ನಡೆದಿದ್ದು, ತುಮಕೂರಿನ ದಂಪತಿ ಪರಿಸರಸ್ನೇಹಿ ಉತ್ಪನ್ನಗಳನ್ನು ತಯಾರಿಸಿ ಉದ್ಯಮ ರೂಪ ನೀಡಿದ್ದಾರೆ. ಪ್ಲೇಟ್ ಬಳಸಿದ ಬಳಿಕ 15 ದಿನಗಳಲ್ಲಿ ಮಣ್ಣಿನೊಂದಿಗೆ ಬೆರೆಯುವುದರಿಂದ ಪರಿಸರಕ್ಕೆ ಹಾನಿ ಇರದು. ಇದರ ಬಳಕೆ ಹಾಗೂ ವಿಲೇವಾರಿ ಸುಲಭ ಇರುವುದರಿಂದ ಪ್ರಮುಖ ಉದ್ದಿಮೆಗಳಿಂದ ಒಂದಿಷ್ಟು ಬೇಡಿಕೆ ಬರುತ್ತಿದೆ. ಕಬ್ಬಿನ ಸಿಪ್ಪೆಯಿಂದ ಪ್ಲೇಟ್, ಕಪ್‌ಗಳನ್ನು ತಯಾರಿಸುವ ತಂತ್ರಜ್ಞಾನ ಕರ್ನಾಟಕದಲ್ಲಿ ಇಲ್ಲದ ಕಾರಣ ನೋಯ್ಡಾದಿಂದ ಕಚ್ಚಾ ವಸ್ತು ತರಿಸಿ ಅವುಗಳನ್ನು ಬಳಕೆಯ ರೂಪ ನೀಡಲಾಗುತ್ತಿದೆ. ಸ್ಥಳೀಯವಾಗಿಯೇ ಕಚ್ಚಾವಸ್ತು ದೊರೆತಲ್ಲಿ ಬೆಲೆಯನ್ನು ಅರ್ಧದಷ್ಟು ಕಡಿಮೆಗೊಳಿಸಬಹುದು ಎನ್ನುತ್ತಾರೆ ಇಕೋ ಕಾನ್ ಕಂಪನಿಯನ್ನು ಹುಟ್ಟುಹಾಕಿರುವ ತುಮಕೂರಿನ ಜಯಲಕ್ಷ್

ಕೃಷಿ ಸಂಶೋಧನೆ ಪ್ರೋತ್ಸಾಹಕ್ಕೆ ಸದಾ ಸಿದ್ಧ: ಸಿಎಂ

ಸಂಶೋಧನೆ ಫಲ ರೈತರಿಗೆ ಸಿಗಬೇಕು | ಕೃಷಿ ಮೇಳಕ್ಕೆ ಚಾಲನೆ, ಹೊಸ ತಳಿ ಲೋಕಾರ್ಪಣೆ | ಸಾಧಕ ರೈತರಿಗೆ ಪ್ರಶಸ್ತಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೃಷಿ ವಿಶ್ವವಿದ್ಯಾಲಯಗಳು ನಡೆಸುವ ಸಂಶೋಧನೆಗಳ ಫಲ ರೈತರಿಗೆ ಸಿಗಬೇಕು. ನೀವು ನಡೆಸುವ ಸಂಶೋಧನೆಗಳಿಗೆ ನೆರವು, ಪ್ರೋತ್ಸಾಹ ನೀಡಲು ನಮ್ಮ ಸರ್ಕಾರ ಸದಾ ಸಿದ್ಧವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಷ್ಟಪಡಿಸಿದರು.

ಹೆಬ್ಬಾಳದ ಜಿಕೆವಿಕೆಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ನೇತೃತ್ವದಲ್ಲಿ ಆಯೋಜಿಸಲಾಗಿದ್ದ 'ಕೃಷಿ ಮೇಳ'ಕ್ಕೆ ಚಾಲನೆ ನೀಡಿ, ಹೊಸ ತಳಿಗಳನ್ನು ಲೋಕಾರ್ಪಣೆಗೊಳಿಸಿ, ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿಗಳನ್ನು ಸಾಧಕರಿಗೆ ಪ್ರದಾನ ಮಾಡಿ ಅವರು ಮಾತನಾಡಿದರು.

ಕೃಷಿ ವಿವಿಗಳು ಕೇವಲ ಕೃಷಿ ಪದವೀಧರರನ್ನು ತಯಾರು ಮಾಡುವ ಸಂಸ್ಥೆಗಳಲ್ಲ, ಕೃಷಿ ವಿದ್ಯಾರ್ಥಿಗಳನ್ನು ತಯಾರಿಸುವ ಜೊತೆಗೆ ಹೊಸ ತಳಿಗಳು, ನೂತನ ತಂತ್ರಜ್ಞಾನ ಅಭಿವೃದ್ಧಿ, ಭೂಮಿಯ ಫಲವತ್ತತೆ ಕಾಪಾಡಿಕೊಳ್ಳುವುದು ಸರಿದಂತೆ ಹಲವು ಅಗತ್ಯ ವಿಷಯಗಳಿಗೆ ಆದ್ಯತೆ ನೀಡಬೇಕು. ಸಂಶೋಧನೆಗಳಿಗೆ ಒತ್ತು ನೀಡಿ ಅವುಗಳ ಫಲ ರೈತರನ್ನು ತಲುಪುವಂತೆ ನೋಡಿಕೊಳ್ಳಬೇಕು. ಸರ್ಕಾರ ನಿಮಗೆ ಅಗತ್ಯವಿರುವ ಬೆಂಬಲ, ಪ್ರೋತ್ಸಾಹ ನೀಡಲು ಸಿದ್ಧವಿದೆ ಎಂದು ಭರವಸೆ ನೀಡಿದರು.

ರೋಗ, ಬರ ನಿರೋಧಕ ತಳಿ ಅಗತ್ಯ: ಕೃಷಿ ಎವಿಯು ಐದು ಹೊಸ ತಳಿಗಳನ್ನು ಬಿಡುಗಡೆ ಮಾಡಿರುವುದು ಸಂತೋಷದ ಸಂಗತಿಯಾಗಿದೆ. ಕಡಿಮೆ ನೀರಿನಲ್ಲೂ ಬೆಳೆಯುವ ಮತ್ತು ರೋಗ ನಿರೋಧಕ ಶಕ್ತಿ ಇರುವ ತಳಿಗಳು ಇಂದಿನ ಅಗತ್ಯವಾಗಿವೆ. ಬಹಳಷ್ಟು ರೈತರು ಇಂದು ಸಂಕಷ್ಟದಲ್ಲಿದ್ದು, ಹವಾಮಾನ ವೈಪರೀತ್ಯದಿಂದ ಬರಗಾಲವೂ ಇದೆ. ಇಂತಹ ಪರಿಸ್ಥಿತಿಯಲ್ಲಿ ರೈತರನ್ನು ಕಾಪಾಡುವುದು ಸರ್ಕಾರದ ಹಾಗೂ ಕೃಷಿ ವಿವಿಗಳ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಶೇ.90 ರಷ್ಟು ಬರಗಾಲ ಉಂಟಾಗಿದ್ದು, 223 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಸರ್ಕಾರ ಬೆಳೆ ಹಾನಿಯ ನಷ್ಟ ತುಂಬಿಕೊಡಲು ಸಾಧ್ಯವಾಗುವುದಿಲ್ಲ, ನಷ್ಟ ಭರಿಸುತ್ತೇವೆ ಎಂದರೆ ರೈತರನ್ನು ತಪ್ಪು ದಾರಿಗೆ ಎಳೆದಂತಾಗುತ್ತದೆ. ಸುಮಾರು ₹33 ಸಾವಿರ ಕೋಟಿ ನಷ್ಟ ಉಂಟಾಗಿದೆ. ಎನ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ ₹17,900 ಕೋಟಿ ಪರಿಹಾರವನ್ನು ಕೇಂದ್ರದಿಂದ ಕೇಳಲಾಗಿದೆ ಎಂದು ವಿವರಿಸಿದರು.

ಇದೇ ಸಂದರ್ಭದಲ್ಲಿ ಹಲವು ರೈತರಿಗೆ ರಾಜ್ಯಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿಯನ್ನು ಸಿದ್ದರಾಮಯ್ಯ ಅವರು ಪ್ರದಾನ ಮಾಡಿದರು. ಕಾರ್ಯಕ್ರಮ ಉದ್ಘಾಟನೆಗೂ ಮುನ್ನ ಸಿದ್ದರಾಮಯ್ಯ ಅವರು ಬೆಳೆ ಪ್ರಾತ್ಯಕ್ಷಿಕೆ ತಾಕುಗಳು, ಮಸ್ತು ಪ್ರದರ್ಶನ ಮಳಿಗೆಗಳಿಗೆ ಬೇಟಿ ನೀಡಿ ಮಾಹಿತಿ ಪಡೆದುಕೊಂಡರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶಾಸಕ ಶರತ್ ಬಚ್ಚೇಗೌಡ, ಕೃಷಿ ವಿವಿ ಕುಲಪತಿ ಡಾ। ಎಸ್.ವಿ.ಸುರೇಶ ಹಾಜರಿದ್ದರು.



ಹೆಬ್ಬಾಳದ ಜಿಕೆವಿಕೆಯಲ್ಲಿ ಆಯೋಜಿಸಿರುವ ಕೃಷಿ ಮೇಳಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಣಜಕ್ಕೆ ಧಾನ್ಯಗಳನ್ನು ಸುರಿಯುವ ಮೂಲಕ ಚಾಲನೆ ನೀಡಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೃಷಿ ಸಚಿವ ಚಲುವರಾಯಸ್ವಾಮಿ, ಶಾಸಕ ಶರತ್ ಬಚ್ಚೇಗೌಡ, ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ ಹಾಜರಿದ್ದರು.



ಹೆಬ್ಬಾಳದ ಜಿಕೆವಿಕೆಯಲ್ಲಿ ಆಯೋಜಿಸಿರುವ ಕೃಷಿ ಮೇಳದಲ್ಲಿ ಹಲವು ಸಾಧಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ ನೀಡಿ ಗೌರವಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೃಷಿ ಸಚಿವ ಚಲುವರಾಯಸ್ವಾಮಿ, ಶಾಸಕ ಶರತ್ ಬಚ್ಚೇಗೌಡ, ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ ಇದ್ದರು.

ಕೃಷಿಯತ್ತ ಯುವಕರ ಸೆಳೆಯಲು ಸಿದ್ದು ಕರೆ

ಕೃಷಿಯು ಲಾಭದಾಯಕವಾಗಿಲ್ಲ ಎಂದು ಯುವಕರು ಕೃಷಿಯಿಂದ ವಿಮುಖರಾಗುತ್ತಿದ್ದು, ಅವರನ್ನು ಸೆಳೆಯುವ ಕೆಲಸವನ್ನು ಕೃಷಿ ವಿಶ್ವವಿದ್ಯಾಲಯಗಳು ಮಾಡಬೇಕಿದೆ. ಹೆಚ್ಚು ಬೇಡಿಕೆ ಇರುವ ಸಿರಿಧಾನ್ಯಗಳನ್ನು ಬೆಳೆಯಲು ರೈತರನ್ನು ಪ್ರೋತ್ಸಾಹಿಸಬೇಕು. ರೈತರ ಹಿತದೃಷ್ಟಿಯಿಂದ ಸರ್ಕಾರ ಕೃಷಿ ಭಾಗ್ಯ ಯೋಜನೆಯನ್ನು ಪುನಃ ಜಾರಿ ಮಾಡಿದೆ. ರೈತರು ಬಹುಬೆಳೆಗಳನ್ನು ಬೆಳೆಯುವ ಮೂಲಕ ಜೀವನಮಟ್ಟ ಉತ್ತಮಪಡಿಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಲಹೆ ನೀಡಿದರು. ಕೃಷಿ ಸಚಿವ ಚಲುವರಾಯಸ್ವಾಮಿ ಅವರು ಮಾತನಾಡಿ, ದುಡಿಯುವ ಕೈಗಳು ಸದೃಢವಾದಾಗ ಮಾತ್ರ, ರಾಜ್ಯ ಮತ್ತು ದೇಶದ ಅಭಿವೃದ್ಧಿಯಾಗುತ್ತದೆ. ಕೃಷಿ ವಿವಿಗಳು ತಮ್ಮ ಸಂಶೋಧನೆಗಳನ್ನು ರೈತರಿಗೆ ತಲುಪಿಸಲು ಕೃಷಿ ಮೇಳಗಳನ್ನು ನಿರಂತರವಾಗಿ ಆಯೋಜಿಸುತ್ತಿರುವುದು ಸಂತಸದ ವಿಚಾರವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೋಳಿ, ಮೀನು ನೋಡಲು ಮುಗಿಬಿದ್ದ ಜನ

ಒಂದೇ ದಿನ 400 ಕೋಳಿ ಮರಿ ಬಿಕರಿ | 15 ಸಾವಿರ ರು. ಮೌಲ್ಯದ ಮೊಲವೂ ಆಕರ್ಷಣೆ

• **ಸಿದ್ದು ಚಿಕ್ಕಬಳ್ಳೇಕೆರೆ**
ಕನ್ನಡಪ್ರಭ ವಾರ್ತೆ ಬೆಂಗಳೂರು

ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಆಯೋಜಿಸುವ ಬಹು ನಿರೀಕ್ಷಿತ 'ಕೃಷಿ ಮೇಳ'ಕ್ಕೆ ಶುಕ್ರವಾರ ಚಾಲನೆ ದೊರೆತಿದ್ದು ಕುಕ್ಕುಟ ಪ್ರಪಂಚ, ಮತ್ಸ್ಯ ಲೋಕ ಜನಾಕರ್ಷಣೆ ಕೇಂದ್ರವಾಗಿದ್ದವು.

ಹೆಸರಘಟ್ಟದ ಸೆಂಟ್ರಲ್ ಆಫ್ ಎಕ್ಸಲೆನ್ಸ್ ಫಾರ್ ಅನಿಮಲ್ ಹ್ಯೂಡ್ರಿಯವರ ಮಳಿಗೆಯಲ್ಲಿದ್ದ ಥರೇವಾರಿ ಕೋಳಿಗಳನ್ನು ಮೇಳಕ್ಕೆ ಆಗಮಿಸಿದ ಜನತೆ ಕುತೂಹಲದಿಂದ ವೀಕ್ಷಿಸಿ ಮರಿಗಳನ್ನು ಖರೀದಿಸಿದರು. ಸುಧಾರಿತ ತಳಿಗಳಾಗಿದ್ದು, ಮನೆಯ ಹಿತ್ತಲಿನಲ್ಲಿ ಸಾಕಲು ಸೂಕ್ತವಾದ ಕಾವೇರಿ, ಅಸಿಲ್ ಕ್ರಾಸ್, ಕಳಿಂಗ ಬ್ರೌನ್ ತಳಿಗಳು ವಿಶೇಷ ಆಕರ್ಷಣೆಯಾಗಿದ್ದವು.

ಕಪ್ಪು ಮೈಬಣ್ಣದ ಕಾವೇರಿ ಕೋಳಿಯು ಮೊಟ್ಟೆ ಮತ್ತು ಮಾಂಸ ಎರಡಕ್ಕೂ ಸೂಕ್ತವಾಗಿವೆ. ಒಂದು ದಿನದ ಪುಟ್ಟ ಮರಿಯೊಂದನ್ನು ₹25ಕ್ಕೆ ಮಾರಾಟ ಮಾಡುತ್ತಿದ್ದು, ಮಧ್ಯಾಹ್ನವೇ 400 ಮರಿ ಮಾರಾಟವಾಗಿ ಸಂಜೆಯ ವೇಳೆಗೆ ಪುನಃ ಮರಿಗಳನ್ನು ತರಿಸಿಕೊಳ್ಳಬೇಕಾಯಿತು. ಮತ್ತೊಂದೆಡೆ, 5 ವಾರದ 4 ಮರಿಗೆ ₹250 ನಿಗದಿ ಮಾಡಿದ್ದು ಬೇಡಿಕೆ ಇದ್ದುದು ಕಂಡುಬಂತು. ಹೆಬ್ಬಾಳದ ಪಶುವೈದ್ಯಕೀಯ ಮಹಾವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿಗಳಾದ ಸ್ವರ್ಣಧಾರ, ಗಿರಿರಾಜ, ರಾಜ-2 ಕೋಳಿಗಳೂ ಗಮನ ಸೆಳೆದವು. ಯಲಹಂಕದ ಆಟ್ಯೂರಿನ ಎಕೆವನ್ ಫಾರಂನವರು ₹700ಕ್ಕೆ ಜೋಡಿ ಟರ್ಕಿ ಕೋಳಿ, ಜೋಡಿ ಖಡಕ್‌ನಾಥ್‌ಗೆ ₹300ರಂತೆ ಮಾರಾಟ ಮಾಡುತ್ತಿದ್ದು, ಗಿಳಿಮೂಗಿನ ಕೋಳಿ ಮರಿಯೊಂದಕ್ಕೆ ₹3 ಸಾವಿರ ದರ ಇದ್ದುದು ಆಶ್ಚರ್ಯ ಉಂಟು ಮಾಡಿತು. ಮುದ್ದಾದ ಮೊಲದ ಮರಿಗಳೂ ಮಾರಾಟಕ್ಕಿದ್ದವು.

₹15 ಸಾವಿರ ಮೌಲ್ಯದ ಮೊಲ!: ನ್ಯೂಜಿಲೆಂಡ್ ವೈಟ್ ಮತ್ತು ಬ್ಲ್ಯಾಕ್ ಜೈಂಟ್ ಮೊಲದ ಮರಿಗಳನ್ನು ತಲಾ ₹600ಕ್ಕೆ ಮಾರಾಟ ಮಾಡಿದ್ದೂ ಕೃಷಿ ಮೇಳದಲ್ಲಿ ಕಂಡುಬಂತು. ಬೃಹತ್ ಗಾತ್ರದ 'ಜರ್ಮನ್ ಆಂಗೋರಾ' ಮೊಲದ ಮರಿಯನ್ನು ಜನಾಕರ್ಷಣೆಗೆಂದು ವ್ಯಾಪಾರಿಯೊಬ್ಬರು ಪ್ರದರ್ಶಿಸಿದ್ದು ಇದರ ಬೆಲೆಬರೋಬ್ಬರಿ ₹15 ಸಾವಿರ ಎಂದು ತಿಳಿದು ಜನತೆ ಆಶ್ಚರ್ಯಚಕಿತರಾದರು.

ಮಜಬೂತ್ ಹಳ್ಳಿಕಾರ್ ಎತ್ತು: ಹಳ್ಳಿಕಾರ್ ತಳಿಯ ಆಕರ್ಷಕ ಎತ್ತುಗಳೂ ಮೇಳಕ್ಕೆ ಬಂದವರನ್ನು ತಮ್ಮತ್ತ ಸೆಳೆದವು. ಬಿಗ್‌ಬಾಸ್ ಖ್ಯಾತಿಯ ಸಂತೋಷ್ ಒಡೆತನದ 'ಲವ-ಕುಶ', ತುರುವೇಕೆರೆ ಶಾಸಕ ಮಸಾಲಾ ಜಯರಾಂ ಆವರಿಂದ ₹26 ಲಕ್ಷ ನೀಡಿ ಖರೀದಿಸಿ ತಂದಿದ್ದ 'ಏಕಲವ್ಯ' ಜೋಡಿ, ಉದ್ದ ಕಿವಿ ಹೊಂದಿದ್ದ ₹3 ಲಕ್ಷ ಮೌಲ್ಯದ ಹೋತ ಸಹ ಮೇಳದ ಆಕರ್ಷಣೆಯಾಗಿದ್ದು, ಜನರು ಹೋತದ ಜೊತೆಗೆ ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂತಸಪಟ್ಟರು.



ಮಕ್ಕಳ ಮನಸೂರೆಗೊಂಡ 'ಮತ್ಸ್ಯ' ಲೋಕ

ಬಣ್ಣಬಣ್ಣದ, ವಿವಿಧ ಗಾತ್ರದ ಮೀನಿನ ಮರಿಗಳು ಮೇಳಕ್ಕೆ ಆಗಮಿಸಿದವರಲ್ಲಿ, ಅದರಲ್ಲೂ ವಿಶೇಷವಾಗಿ ಮಕ್ಕಳಿಗೆ ಆಶ್ಚರ್ಯಮಿಶ್ರಿತ ಖುಷಿ ನೀಡುತ್ತಿತ್ತು. ಭದ್ರಪ್ಪ ಲೇಔಟ್‌ನ ಮೀನುಗಾರಿಕಾ ಸಂಶೋಧನಾ ಮತ್ತು ಮಾಹಿತಿ ಕೇಂದ್ರದವರು ಸಾಕಷ್ಟು ಜಾತಿಯ ಮೀನಿನ ಮರಿ, ಆಕ್ವೇರಿಯಂಗಳನ್ನು ಮಾರಾಟ ಮಾಡುತ್ತಿದ್ದು ಜನರಿಂದ ಉತ್ತಮ ಪ್ರತಿಕ್ರಿಯೆ ಕಂಡುಬಂತು. ಹೂಮ್ಮೀನು, ಬಿಳಿ ಮೊಲ್ಲಿ, ಕಪ್ಪು ಮೊಲ್ಲಿ, ಕೆಂಪು ಪ್ಯಾಟಿ, ಕೊಯಿಗೆಂಡೆ, ಸಿಗಾಪುರದ ಗಪ್ಪಿ, ಕೆಂಪುಕತ್ತಿ ಬಾಲದ ಮೀನು, ₹100 ಮೌಲ್ಯದ ಫೈಟರ್ ಮೀನಿನ ಮರಿಗಳು ಹೆಚ್ಚಾಗಿ ಮಾರಾಟವಾದವು. ನಮ್ಮಲ್ಲಿ ₹10 ಸಾವಿರ ಮೌಲ್ಯದ ಜಪಾನೀಸ್ ಕೋಯಿ ಮೀನು ಸಹ ಮಾರಾಟಕ್ಕೆ ಲಭ್ಯವಿದೆ ಎನ್ನುತ್ತಾರೆ ಮಾಹಿತಿ ಕೇಂದ್ರದ ಅಧಿಕಾರಿಗಳು.

ಅಚ್ಚುಕಟ್ಟಾದ ಊಟದ ವ್ಯವಸ್ಥೆ



ಕೃಷಿ ಮೇಳಕ್ಕೆ ಆಗಮಿಸಿದವರಿಗೆ ರಿಯಾಯಿತಿ ದರದಲ್ಲಿ ಊಟಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಮೊದಲ ದಿನವಾದ ಶುಕ್ರವಾರ 8 ಸಾವಿರಕ್ಕೂ ಅಧಿಕ ಮಂದಿ ಮಧ್ಯಾಹ್ನ ಊಟ ಮಾಡಿದರು. ಊಟಕ್ಕೆ ಮುದ್ದೆ, ಅನ್ನ, ಸಾರು, ಪಲ್ಯೆ, ಮೈಸೂರ್ ಪಾಕ್ ನೀಡಲಾಯಿತು. ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿದ್ದು ಕಂಡುಬಂತು.

1.31 ಲಕ್ಷ ಮಂದಿ ಭೇಟಿ, 80 ಲಕ್ಷ ರು. ವಹಿವಾಟು

ಕೃಷಿ ಮೇಳದ ಮೊದಲ ದಿನವಾದ ಶುಕ್ರವಾರ 1.31 ಲಕ್ಷ ಮಂದಿ ಭೇಟಿ ನೀಡಿದ್ದಾರೆ. 625 ಮಳಿಗೆಗಳನ್ನು ತೆರೆದಿದ್ದು 80 ಲಕ್ಷ ರುಪಾಯಿಗೂ ಅಧಿಕ ವಹಿವಾಟು ನಡೆದಿದೆ ಎಂದು ಕೃಷಿ ವಿವಿ ಮೂಲಗಳು ಮಾಹಿತಿ ನೀಡಿವೆ. ಕೃಷಿ ಯಂತ್ರೋಪಕರಣ, ಬಿತ್ತನೆ ಬೀಜ, ರಸಗೊಬ್ಬರ, ಕೀಟನಾಶಕ, ಆಹಾರ ಪದಾರ್ಥ, ಗೃಹೋಪಯೋಗಿ ವಸ್ತುಗಳು, ಸಿರಿಧಾನ್ಯ ಸೇರಿದಂತೆ ಹಲವು ವಸ್ತುಗಳ ಮಾರಾಟ ನಡೆದಿದ್ದು, ₹80 ಲಕ್ಷಕ್ಕೂ ಅಧಿಕ ವಹಿವಾಟು ನಡೆದಿರುವ ಅಂದಾಜಿದೆ.

ರಾಗಿ ಬೋಟಿ ಮಾರಾಟದ ಭರಾಟೆ



ರಾಗಿಯಿಂದ ತಯಾರಿಸಿದ ಬೋಟಿ ಹೆಚ್ಚಿನ ಮಳಿಗೆಗಳಲ್ಲಿ ಮಾರಾಟ ಮಾಡಲಾಗುತ್ತಿದ್ದು, ಸ್ಥಳದಲ್ಲೇ ತಯಾರಿಸಿ ರುಚಿ ಸವಿಯಲು ಒಂದೆರಡು ಬೋಟಿ ಉಚಿತವಾಗಿ ನೀಡುತ್ತಿದ್ದರಿಂದ ಬಾಯಿ ಚಪ್ಪರಿಸಿದ ಜನರು 300 ಗ್ರಾಂ ಬೋಟಿ ಪಾಕೆಟ್ ಅನ್ನು ₹100ಕ್ಕೆ ಖರೀದಿಸಿ ತೆರಳುತ್ತಿದ್ದುದು ಹೆಚ್ಚಾಗಿ ಕಂಡುಬಂತು.

400 ಭತ್ತದ ತಳಿ ಸಂರಕ್ಷಣೆ

ಬೆಂಗಳೂರು: ಕೃಷಿ ಮೇಳದಲ್ಲಿ ಸಾವಯವ ಕೃಷಿಯ ಕುರಿತು ಸಂಶೋಧನೆಯಲ್ಲಿ ತೊಡಗಿಸಿಕೊಂಡ ನಾಗೇನಹಳ್ಳಿ ಸಾವಯವ ಕೃಷಿ ಸಂಶೋಧನ ಕೇಂದ್ರದ ಮಳಿಗೆ ರೈತರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ.

■ ಸಾವಯವ ಕೃಷಿ ಸಂಶೋಧನೆ ಕೇಂದ್ರದಿಂದ ತಳಿಗಳ ಅಭಿವೃದ್ಧಿ

ಸಾವಯವ ಸಂಶೋಧನ ಕೇಂದ್ರವು ಇದುವರೆಗೆ 300 ರಿಂದ 400 ಸ್ಥಳೀಯ ಭತ್ತದ ತಳಿಯನ್ನು ಸಂರಕ್ಷಣೆ ಮಾಡಿರುವುದರ ಜತೆಗೆ ರೈತರಿಗೆ ಸಾವಯವ ಕೃಷಿ ಪದ್ಧತಿ ಅನುಕರಣೆ ನಿರಂತರವಾದ ಪ್ರೋತ್ಸಾಹ ನೀಡುತ್ತಾ ಬಂದಿದೆ. ಪ್ರತಿ ವರ್ಷ ಸಂರಕ್ಷಿಸಲಾದ ಭತ್ತ ತಳಿಯನ್ನು ಬಿತ್ತನೆ ಮಾಡಿ, ಬೀಜವನ್ನು ಸಂರಕ್ಷಣೆ ಮಾಡುತ್ತಿದೆ. ಜತೆಗೆ ರೈತರಿಗೆ ಅಗತ್ಯವಿರುವ ಹಳೆಯ ಹಾಗೂ ಸ್ಥಳೀಯ ತಳಿಗಳ ಸಾವಯವ ಬೀಜಗಳನ್ನು ರಾಜ್ಯಾದ್ಯಂತ ಈ ಕೇಂದ್ರವೇ ಸರಬರಾಜು ಮಾಡುತ್ತಿದೆ.

ಶತಮಾನದ ಇತಿಹಾಸವನ್ನು ಹೊಂದಿರುವ ಮೈಸೂರಿನ ನಾಗೇನಹಳ್ಳಿ ಸಾವಯವ ಕೃಷಿ ಸಂಶೋಧನ ಕೇಂದ್ರವು ಕಳೆದ 18 ವರ್ಷಗಳಿಂದ ಸಾವಯವ ಕೃಷಿ ಸಂಬಂಧಿಸಿದಂತೆ ಕಾರ್ಯಾಚರಿಸುತ್ತಿದೆ. ಕೇಂದ್ರದಲ್ಲಿ ನಿರಂತರವಾಗಿ ಸಾವಯವ ಕೃಷಿ ತರಬೇತಿಗಳನ್ನು ರೈತರಿಗೆ ನೀಡುತ್ತಾ ಬಂದಿದೆ. ಜತೆಗೆ ಸಾವಯವ ಬೀಜ ಉತ್ಪಾದನೆ ಹಾಗೂ ಸಂಸ್ಕರಣೆ ಮಾಡುತ್ತಿದೆ.

ಜಾಗೃತಿ, ತರಬೇತಿ: ಸಾಮಾನ್ಯವಾಗಿ ಸಾವಯವ ಕೃಷಿ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಆವರಿಗೆ ಸಾವಯವ ಕೃಷಿ ಆಳವಡಿಕೆಗೆ ಅಗತ್ಯವಿರುವ ಎಲ್ಲ ತರಬೇತಿಯನ್ನು ನೀಡಲಾಗುತ್ತದೆ. ನಿರಂತರವಾಗಿ ಸ್ಥಳೀಯ ಭತ್ತದ ತಳಿ ಸಂರಕ್ಷಣೆ ಮಾಡಲಾಗುತ್ತಿದೆ ಎಂದು ನಾಗೇನಹಳ್ಳಿಯ ಸಾವಯವ ಕೃಷಿ ಸಂಶೋಧನಾ ಕೇಂದ್ರದ ಹಿರಿಯ ಕ್ಷೇತ್ರ ಅಧೀಕ್ಷಕ ಡಾ।ಸಿ. ರಾಮಚಂದ್ರ ತಿಳಿಸಿದ್ದಾರೆ.

ಸಿಎಂ ಮನೆ ನಂಟು!

ಸಾವಯವ ಕೇಂದ್ರದಲ್ಲಿ ಬೆಳೆಸುವ ಕೆಂಪುರಾಜ ಮುಡಿ ಅಕ್ಕಿ ಭಾರಿ ಬೇಡಿಕೆ ಇದೆ. ಮಾರುಕಟ್ಟೆಯಲ್ಲಿ ಲಭ್ಯವಿರುವ ಒಂದು ಕೆ.ಜಿ.ಗೆ 100 ರೂ. ವರೆಗೆ ದರ ನಿಗದಿ ಪಡಿಸಲಾಗಿದೆ. ಆದರೆ ಕೇಂದ್ರದಲ್ಲಿ 60 ರೂ. ನಿಗದಿ ಪಡಿಸಿದೆ. ಇತ್ತೀಚಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮನೆಗೂ ಸಹ ಇಲ್ಲಿಂದಲೇ ಸಾವಯವ ಕೆಂಪುರಾಜ ಮುಡಿ ಅಕ್ಕಿ ಪೂರೈಕೆಯಾಗುತ್ತಿದೆ.

18-11-2023
Udayavani Pg 02

18-11-2023
Kannadaprabha Pg 02

ರೈತರ ಅಭಿವೃದ್ಧಿಯಲ್ಲಿ ಕೃಷಿ ವಿವಿ ಪಾತ್ರ ಮುಖ್ಯ

ಕೃಷಿಮೇಳಕ್ಕೆ ಚಾಲನೆ | ಉತ್ತಮ ರೈತರಿಗೆ ಗೌರವ | ರೈತರಿಗೆ ಬರ ಮಾಹಿತಿ ಲಭ್ಯ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಆಯೋಜಿಸಿರುವ 4 ದಿನಗಳ ಕೃಷಿ ಮೇಳಕ್ಕೆ ಶುಕ್ರವಾರ ಚಾಲನೆ ದೊರೆತಿದೆ.

ಮೇಳ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಕರ್ನಾಟಕದಲ್ಲಿ ಸ್ಥಾಪನೆಯಾದ ಮೊದಲ ವಿಶ್ವ ವಿದ್ಯಾಲಯ. ರಾಜ್ಯದ ಜನ ಹೆಚ್ಚಿನದಾಗಿ ಕೃಷಿಯನ್ನು ಅವಲಂಬಿಸಿದ್ದಾರೆ, ರಾಜ್ಯದ ರೈತರ ಅಭಿವೃದ್ಧಿಗೆ ಕೃಷಿ ವಿವಿ ಪ್ರಮುಖ ಪಾತ್ರ ವಹಿಸಿದೆ ಎಂದರು. ಕಾರ್ಯಕ್ರಮ ಉದ್ಘಾಟನೆ ಬಳಿಕ ಸಿಎಂ ಸಿದ್ದರಾಮಯ್ಯ ಮತ್ತು ಸಚಿವರು ಬೆಳೆ ಪ್ರಾತ್ಯಕ್ಷಿಕೆ ತಾಕುಗಳು ಹಾಗೂ ವಸ್ತು ಪ್ರದರ್ಶನ ಮಳಿಗೆಗಳಿಗೆ ಭೇಟಿ ನೀಡಿ ರೈತರೊಂದಿಗೆ ಮಾತುಕತೆ ನಡೆಸಿದರು. ಡಿಸಿಎಂ ಡಿ.ಕೆ. ಶಿವಕುಮಾರ್, ಕೃಷಿ ಸಚಿವ ಚಲುವರಾಯಸ್ವಾಮಿ ಹಾಜರಿದ್ದರು.



ಕೃಷಿಮೇಳಕ್ಕೆ ಚಾಲನೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ವಿವಿಧ ಬೆಳೆಗಳನ್ನು ವೀಕ್ಷಿಸಿದರು. ಸಚಿವ ಚಲುವರಾಯ ಸ್ವಾಮಿ ಮುಂತಾದವರು ಉಪಸ್ಥಿತರಿದ್ದರು.

ರಾಗಿ ಆಧಾರಿತ ಆಹಾರ ಸೇವನೆಯನ್ನು ಉತ್ತೇಜಿಸುವ ಕ್ರಮದಲ್ಲಿ ಈ ಬಾರಿ ಕೃಷಿ ಮೇಳ ಆಯೋಜನೆ ಮಾಡಲಾಗಿದೆ. ಆಹಾರ, ಆರೋಗ್ಯ ಮತ್ತು ಆದಾಯಕ್ಕಾಗಿ ರಾಗಿ ಎಂಬ ವಿಷಯ ಕೃಷಿಮೇಳದ ಪ್ರಮುಖ ವಿಚಾರವಾಗಿದೆ. ಕಾರ್ಯಕ್ರಮದಲ್ಲಿ ರಾಗಿ, ಬಿಳಿ ರಾಗಿ, ಪುಟ್ಟ ರಾಗಿ, ಸೂರ್ಯಕಾಂತಿ ಮತ್ತು ಹಲಸಿನ ಐದು ಹೊಸ ತಳಿಗಳನ್ನು ಅನಾವರಣಗೊಳಿಸಲಾಗಿದೆ. ರಾಜ್ಯದ ಉತ್ತಮ ರೈತರನ್ನು ಗುರುತಿಸಿ ಪ್ರಶಸ್ತಿ ಕೂಡ ವಿತರಣೆ ಮಾಡಲಾಯಿತು.

ಸುಮಾರು 625 ಮಳಿಗೆಗಳನ್ನು ತೆರೆಯಲಾಗಿದ್ದು, ಸುಮಾರು 10 ಲಕ್ಷಕ್ಕೂ ಹೆಚ್ಚು ಮಂದಿ ಭೇಟಿ ನೀಡುವ ಸಾಧ್ಯತೆ ಇದೆ. ಮೇಳದಲ್ಲಿ ರೈತರಿಗೆ ಕ್ಷೇತ್ರ ಸಂದರ್ಶನ, ಕೃಷಿ ವಿಜ್ಞಾನಿ, ತಜ್ಞರೊಂದಿಗೆ ಸಮಾಲೋಚನೆ, ಮಾರ್ಗದರ್ಶನ, ತಾಕುಗಳಲ್ಲಿ ಪ್ರಾತ್ಯಕ್ಷಿಕೆ, ಹೊಸ ತಳಿಗಳ ಬಗ್ಗೆ ಮಾಹಿತಿ ಒದಗಿಸಲಾಗುತ್ತದೆ.

ಕೃಷಿಗೆ ಸಂಬಂಧಿಸಿದ ವಿವಿಧ ಇಲಾಖೆಗಳು, ಸರ್ಕಾರಿ ಸಂಸ್ಥೆಗಳು ಹಾಗೂ ವಿವಿಗಳ ಎಲ್ಲ ವಿಭಾಗಗಳಲ್ಲಿ ನಡೆದಿರುವ ಸಂಶೋಧನೆ, ಅವಿಷ್ಕಾರದ ಮಾಹಿತಿಯನ್ನು ವಸ್ತುಪ್ರದರ್ಶನದಲ್ಲಿ ತಿಳಿಸಲು ವಿಶೇಷ ವ್ಯವಸ್ಥೆ ಕಲ್ಪಿಸಲಾಗಿದೆ. ಈ ಬಾರಿಯ ಕೃಷಿ ಮೇಳವನ್ನು ಆಹಾರ–ಆರೋಗ್ಯ– ಆದಾಯಕ್ಕಾಗಿ ಸಿರಿಧಾನ್ಯಗಳು ಘೋಷವಾಕ್ಯದೊಂದಿಗೆ ಆಯೋಜಿಸಲಾಗಿದೆ. ಕೃಷಿ ಹಾಗೂ ಅದರ ಪೂರಕ ಕಸುಬುಗಳಲ್ಲಿ ತೊಡಗಿಸಿಕೊಳ್ಳುವ ಸಮಗ್ರ ಮಾಹಿತಿಯನ್ನು ರೈತರಿಗೆ ನೀಡಲು ವಿವಿ ವಿಜ್ಞಾನಿಗಳು, ಸಂಶೋಧನಾ ವಿದ್ಯಾರ್ಥಿಗಳು ಸೇರಿ 500ಕ್ಕೂ ಹೆಚ್ಚು ಮಂದಿಯನ್ನು ಬಳಸಿಕೊಳ್ಳಲಾಗುತ್ತಿದೆ.

ರೈತರ ಆವಿಷ್ಕಾರ ಹಾಗೂ ಕೃಷಿ ನವೋದ್ಯಮ, ಕೃಷಿಯಲ್ಲಿ ನೂತನ ತಂತ್ರಜ್ಞಾನಗಳ ಬಗ್ಗೆ ಮಾಹಿತಿ, ಸಮಗ್ರ ಬೇಸಾಯ ಪದ್ಧತಿ ಪ್ರಾತ್ಯಕ್ಷಿಕೆ, ಹನಿ ಹಾಗೂ ತುಂತುರು ನೀರಾವರಿ ಪದ್ಧತಿ, ಸುಧಾರಿತ ಕೃಷಿ ಯಂತ್ರೋಪಕರಣಗಳ ಪ್ರದರ್ಶನ, ಖಿಷ್ಟಿ ಬೇಸಾಯಕ್ಕೆ ಸೂಕ್ತವಾದ ಬೆಳೆ ಪದ್ಧತಿ, ತೋಟಗಾರಿಕೆ ಬೆಳೆಗಳ ಮತ್ತು ನಿಖರ ಕೃಷಿ ಪ್ರಾತ್ಯಕ್ಷಿಕೆ, ಕೊಯ್ಲುನೋತ್ತರ ತಾಂತ್ರಿಕತೆ, ಕೃಷಿ ಉತ್ಪನ್ನ, ಸಂಸ್ಕರಣೆ, ಮೌಲ್ಯವರ್ಧನೆ ಹಾಗೂ ಮಣ್ಣು ಪರೀಕ್ಷೆಗೆ ಅನುಗುಣವಾಗಿ ಬೆಳೆ ಸ್ಥಂದನೆ ಪ್ರಾತ್ಯಕ್ಷಿಕೆ ನೀಡಲಾಗುತ್ತದೆ.

ಬರ ಪರಿಸ್ಥಿತಿಗಳಿಗೆ ನಿರೋಧಕವಾದ ಬೆಳೆಗಳನ್ನು ಬೆಳೆಸುವ ಬಗ್ಗೆ ರೈತರಿಗೆ ಶಿಕ್ಷಣ ನೀಡುವ ಗುರಿಯನ್ನು ಕೃಷಿಮೇಳ ಹೊಂದಿದೆ. ಹನಿ ಮತ್ತು ತುಂತುರು ನೀರಾವರಿ ವ್ಯವಸ್ಥೆಗಳು, ಮಳೆ ಕೊಯ್ಲು ವ್ಯವಸ್ಥೆಗಳು ಮತ್ತು ಇತರ ಕೃಷಿ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆಗಳನ್ನು ನೋಡಬಹುದಾಗಿದೆ. ನವೆಂಬರ್ 20 ರವರೆಗೆ ನಡೆಯಲಿರುವ ಈ ಮೇಳದಲ್ಲಿ ವಿವಿಧ ಕುರಿ ತಳಿಗಳನ್ನು ನೋಡಬಹುದು. ಡಾರ್ಪರ್, ರಾಂಬುಲೆಟ್, ಬನ್ನೂರು, ಎಲಗ, ಸನನ್, ಮತ್ತು ಬೆಂಗಳೂರು ಲಾಂಗ್ ಗೋಟ್ ಮುಂತಾದ ಕುರಿಗಳನ್ನು ಕಾಣಬಹುದು.

ಆಕರ್ಷಣೆಯ ಮಾಹಿತಿ ಮಳಿಗೆ

ಬೆಂಗಳೂರು: ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಆಯೋಜಿಸಿರುವ ಕೃಷಿಮೇಳದಲ್ಲಿ ನಿರ್ಮಿಸಿರುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ರಾಜ್ಯ ಸರ್ಕಾರದ ಕಾರ್ಯಕ್ರಮಗಳ ಮಾಹಿತಿ ಪ್ರದರ್ಶನದ ಮಳಿಗೆ ವೀಕ್ಷಕರ ಪಾಲಿಗೆ ಸರ್ಕಾರದ ಸೌಲಭ್ಯಗಳ ಮಾಹಿತಿ ಕೋಶವಾಗಿ ಮಾರ್ಪಡಿಸಿದೆ.

ಕೃಷಿಮೇಳದ ಮಳಿಗೆಗಳ ಪ್ರದೇಶದಲ್ಲಿ ಮೊದಲ ಸಾಲಿನಲ್ಲಿರುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಹಿತಿ ಪ್ರದರ್ಶನ ಮಳಿಗೆಯ ವಿನ್ಯಾಸವು ವಿಶೇಷವಾಗಿದೆ.

ಮಾಹಿತಿ ಪ್ರದರ್ಶನ ಮಳಿಗೆಯಲ್ಲಿ ಅಳವಡಿಸಿರುವ ಫಲಕಗಳಲ್ಲಿ ಸರ್ಕಾರದ ಜನಪ್ರಿಯ ಹಾಗೂ ಮಹತ್ವಾಕಾಂಕ್ಷೆಯ ಕಾರ್ಯಕ್ರಮಗಳ ಮಾಹಿತಿಯ ಜೊತೆಗೆ ಕನ್ನಡ ನಾಡು ನುಡಿಗೆ ಸಂಬಂಧಿಸಿದ ಪ್ರಮುಖ ಮಾಹಿತಿಗಳನ್ನೂ ಸಹ ಪ್ರದರ್ಶಿಸಲಾಗಿದೆ.

ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಕಾರ್ಯಕ್ರಮಗಳಾದ ಸರ್ಕಾರಿ ಬಸ್‌ನಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಮಾಡಲು ಅನುವು ಮಾಡಿರುವ "ಶಕ್ತಿ" ಯೋಜನೆ, ಮನೆಯ ಯಜಮಾನಿಯರಿಗೆ ಆರ್ಥಿಕ ನೆರವು ಕಲ್ಪಿಸುವ, ಸ್ತ್ರೀ ಸ್ವಾವಲಂಬನೆಯತ್ತ ದಿಟ್ಟ ಹೆಜ್ಜೆ "ಗೃಹಲಕ್ಷ್ಮಿ" ಯೋಜನೆ, ಮನ-ಮನ ಬೆಳಗುವ ಧಾನ್ಯದ ಬೆಳಕು "ಗೃಹಜ್ಯೋತಿ" ಯೋಜನೆ, ಪ್ರತಿ ಫಲಾನುಭವಿಗೆ 10 ಕೆಜಿ ಉಚಿತ ಆಹಾರಧಾನ್ಯ ನೀಡುವ "ಅನ್ನಭಾಗ್ಯ" ಯೋಜನೆ ಹಾಗೂ ಯುವಕರ ಶ್ರೇಯೋಭಿವೃದ್ಧಿಗಾಗಿ "ಯುವನಿಧಿ" ಯೋಜನೆಯ ಮಾಹಿತಿ ಲಭ್ಯವಿದೆ.

ರಾಜ್ಯ ಸರ್ಕಾರದ ಜನಪ್ರಿಯ ಕಾರ್ಯಕ್ರಮಗಳಾದ ಸ್ಥಳೀಯ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ನೀಡುವ "ಜನಸ್ಪಂದನ", ಟಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ, ಇಂದಿರಾ ಕ್ಯಾಂಟೀನ್ ಮರು ಪ್ರಾರಂಭ, ತೀರಾಭಾಗ್ಯಕ್ಕೆ ಹತ್ತರ ಸಂಭ್ರಮ, ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ, ದ್ಯಾಂಡ್ ಬೆಂಗಳೂರು, ಸಾಮಾಜಿಕ ಮಾಧ್ಯಮ ನಿರ್ವಹಣಾ ಕೋಶ ಸೇರಿದಂತೆ ಹಲವು ಪ್ರಮುಖ ಕಾರ್ಯಕ್ರಮಗಳ ಕುರಿತು ಮಾಹಿತಿ ಪ್ರದರ್ಶನ ಮಾಡಲಾಗಿದೆ. ಅಷ್ಟೇ ಅಲ್ಲದೇ, ಮಾಹಿತಿ ಪ್ರದರ್ಶನ ಮಳಿಗೆಯಲ್ಲಿ ಭಾರತ ರತ್ನ ಪಡೆದ ಕನ್ನಡಿಗರು, ಕರ್ನಾಟಕದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು, ಕರ್ನಾಟಕ ರತ್ನ ಪುರಸ್ಕೃತರು, ಭಾರತವನ್ನು ಚಂದ್ರನ ಅಂಗಳಕ್ಕೆತಲುಪಿಸಿದ ಇಸ್ರೋ ವಿಜ್ಞಾನಿಗಳಿಗೆ ಸರ್ಕಾರ ಅಭಿನಂದಿಸಿ ಸಲ್ಲಿಸಿರುವ ಗೌರವ, ಭಾರತದ ಸಂವಿಧಾನ ಪೀಠಿಕೆಯ ಜಾಗತಿಕ ವಾಚನದ ವಿಶ್ವದಾಖಲೆ, ಕರ್ನಾಟಕ 50ರ ಸಂಭ್ರಮ ವಿಷಯಗಳ ಮಾಹಿತಿಗಳು ಸಹ ಪ್ರದರ್ಶಿಸಲಾಗಿದೆ.

18-11-2023
S-karanataka- Pg 07

18-11-2023
Hosadignata- Pg 12







ಕೃಷಿಯತ್ತ ಯುವಕರ ಮನವೊಲಿಕೆಗೆ ಯತ್ನಿಸಿ

ಆರ್ಥಿಕವಾಗಿ ಸಬಲರಾಗಲು ಸದಾ ಹಸಿರು ಕ್ರಾಂತಿ ಅವಶ್ಯ -ಸಿಎಂ | ಜಮೀನು ಮಾರಾಟ ಮಾಡಬೇಡಿ-ಡಿಕೆಶಿ

ಬೆಂಗಳೂರು: ಕೃಷಿ ವಿಶ್ವವಿದ್ಯಾಲಯವು ಪದವೀಧರರನ್ನು ತಯಾರು ಮಾಡುವುದಷ್ಟೇ ಅಲ್ಲದೇ ಸಂಶೋಧನೆಗೆ ಮಹತ್ವ ಹಾಗೂ ಕೃಷಿಯಿಂದ ದೂರ ಸರಿಯುತ್ತಿರುವ ಯುವ ಜನತೆಗೆ ಕೃಷಿಯು ಲಾಭದಾಯಕ ಕ್ಷೇತ್ರವೆಂದು ತೋರಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಜಿಕೆವಿಕೆ ಕೃಷಿ ವಿಶ್ವವಿದ್ಯಾನಿಲಯ ವತಿಯಿಂದ ಜಿಕೆವಿಕೆ ಆವರಣದಲ್ಲಿ ಹಮ್ಮಿಕೊಂಡ ಕೃಷಿ ಮೇಳವನ್ನು ಶುಕ್ರವಾರ ಉದ್ಘಾಟಿಸಿದ ಅವರು, ದೇಶದ ಬಹುತೇಕ ಜನರು ಕೃಷಿ ಮೇಲೆ ಅವಲಂಬಿತರಾಗಿದ್ದಾರೆ. ಈ ನಿಟ್ಟಿನಲ್ಲಿ ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಸದಾ ಹಸಿರು ಕ್ರಾಂತಿ ಆವಶ್ಯಕವಾಗಿದೆ ಎಂದರು.

ಹೊಸ ತಳಿಗಳ ಆನ್ವೇಷಣೆ, ಹೊಸ ತಂತ್ರಜ್ಞಾನಗಳ ಬಳಕೆ, ಕನಿಷ್ಠ ಬೆಂಬಲ ಬೆಲೆ, ಗೋದಾಮುಗಳ ಅಭಿವೃದ್ಧಿ ಆದಾಗ ಕೃಷಿಯಲ್ಲಿ ಸುಸ್ಥಿರ ಬೆಳವಣಿಗೆ ಸಾಧ್ಯ. ಆದ್ದರಿಂದ ರಾಜ್ಯ ಸರ್ಕಾರವು ಕೃಷಿ ಭಾಗ್ಯ ಯೋಜನೆ ಮತ್ತೆ ಜಾರಿಗೊಳಿಸಿದೆ. ಹವಾಮಾನ ವೈಪರೀತ್ಯಗಳಿಂದ ಬರಗಾಲ, ಅತಿವೃಷ್ಟಿ, ಅನಾವೃಷ್ಟಿ ಉಂಟಾಗುತ್ತದೆ. ರಾಜ್ಯದಲ್ಲಿ 223 ತಾಲೂಕುಗಳನ್ನು ಬರಪೀಡಿತವೆಂದು ಸರ್ಕಾರ ಘೋಷಿಸಿದೆ. ಸರ್ಕಾರವು ಸಬ್ಸಿಡಿ ನೀಡಬಹುದು. ಆದರೆ, ಬೆಳೆ ನಷ್ಟ ನೀಡಲಾಗುವುದಿಲ್ಲ. ಈ ನಿಟ್ಟಿನಲ್ಲಿ ರೈತರನ್ನು ರಕ್ಷಣೆ ಮಾಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಇದಕ್ಕೆ ಕೃಷಿ ವಿಶ್ವವಿದ್ಯಾಲಯವು ಸಹ ಮಹತ್ವದ ಪಾತ್ರ ನಿರ್ವಹಿಸಬೇಕು ಎಂದು ತಿಳಿಸಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಬರಗಾಲವಿರುವ ಕಾರಣ ನರೇಗಾ ಯೋಜನೆಯ ಮಾನವ ದಿನಗಳನ್ನು 100 ದಿನಗಳ ಬದಲು 150 ದಿನಗಳಿಗೆ ಏರಿಕೆ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ರೈತರು ಏನೇ ಒತ್ತಡ ಬಂದರೂ ತಮ್ಮ ಜಮೀನು ಮಾರಾಟ ಮಾಡಲು ಹೋಗಬೇಡಿ. ಇದು ವೈಯಕ್ತಿಕವಾದ ಮನವಿಯಲ್ಲ, ಸರ್ಕಾರದ ಮನವಿ ಎಂದು ಹೇಳಿದರು.

ಕೃಷಿ ವಿವಿ ರೈತರಿಗೆ ಆದಾಯ ತರುವಂತಹ ತಳಿಗಳ ಕುರಿತು ಹೆಚ್ಚು ಅಧ್ಯಯನ ನಡೆಸಬೇಕು. ಇದರಿಂದ ಅವರ ಬಾಳು ಹಸನಾಗುತ್ತದೆ. ಯಾರೂ ಭೂಮಿ ಮಾರಾಟ ಮಾಡಲು ಹೋಗುವುದಿಲ್ಲ. ನಮ್ಮ ಕರ್ನಾಟಕದಲ್ಲಿ ಬೆಳೆದ ಹೂವು, ಹಣ್ಣು ತರಕಾರಿಗಳು ಹೊರದೇಶಗಳಿಗೆ ರಫ್ತಾಗುತ್ತಿರುವುದು ಹೆಮ್ಮೆಯ ಸಂಗತಿ ಎಂದು ಪ್ರಶಂಸಿಸಿದರು.

ಈ ವೇಳೆ ಕೃಷಿ ಸಚಿವ ಚಲುವರಾಯಸ್ವಾಮಿ, ಶಾಸಕ ಶರತ್ ಬಚ್ಚೇಗೌಡ, ಕೃಷಿ ವಿಶ್ವವಿದ್ಯಾನಿಲಯ ಕುಲಪತಿ ಡಾ.ಎಸ್.ಸುರೇಶ್ ಮುಂತಾದವರಿದ್ದರು.



ಸರ್ಕಾರವು ನೈಸರ್ಗಿಕ ಕೃಷಿಗೆ ಹೆಚ್ಚು ಮಹತ್ವ ನೀಡುತ್ತಿದೆ, ಆಲ್ಲದೇ ಹಣಕ್ಕಿಂತ ದುಡಿಮೆ ಮುಖ್ಯ, ದುಡಿಯುವ ಕೈಗಳು ಸದೃಢವಾದಾಗ ಮಾತ್ರ ರಾಜ್ಯದ ಮತ್ತು ದೇಶದ ಅಭಿವೃದ್ಧಿಯಾಗುತ್ತದೆ.
■ ಎನ್.ಚಲುವರಾಯಸ್ವಾಮಿ, ಕೃಷಿ ಸಚಿವ

ಕೃಷಿ ಸಾಧಕ ರೈತರಿಗೆ ಸನ್ಮಾನ

ರೈತರಾದ ಬಿ.ಆರ್.ಮಂಜುನಾಥ್ ಅವರಿಗೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ರೈತ ಪ್ರಶಸ್ತಿ, ಎಚ್.ಟಿ.ರಾಜೇಂದ್ರರಿಗೆ ಡಾ.ಎಂ.ಎಚ್.ಮರೀಗೌಡ ರೈತ ಪ್ರಶಸ್ತಿ, ಬಿ.ಪಿ.ವಾಸು ಅವರಿಗೆ ಕ್ಯಾನ್ ಬ್ಯಾಂಕ್ ರೈತ ಪ್ರಶಸ್ತಿ, ಎ.ವಿ.ರತ್ನಮ್ಮರಿಗೆ ಕ್ಯಾನ್ ಬ್ಯಾಂಕ್ ರೈತ ಮಹಿಳೆ ಪ್ರಶಸ್ತಿ ಹಾಗೂ ಬಿ.ಜಿ.ಮಂಜೇಗೌಡರಿಗೆ ಡಾ.ಆರ್. ದ್ವಾರಕೀನಾಥ್ ರೈತ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ರೈತರ ಗಮನ ಸೆಳೆದ ಬಾಟೆಲ್ ಬದನೆ, ಚೆರ್ರಿ ಟೊಮೆಟೊ

• ಅನುಪಾ ಕೆ.

ಬೆಂಗಳೂರು: ಅಧಿಕ ಇಳುವರಿ ಪಡೆಯುವ ಮೂಲಕ ಉತ್ತಮ ಆದಾಯ ಪಡೆಯ ಬಹುದಾಗಿರುವ ಬಾಟಲ್ ಬದನೆ ಹಾಗೂ ಚೆರ್ರಿ ಟೊಮೆಟೊಗಳು ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳದಲ್ಲಿ ರೈತರ ಗಮನ ಸೆಳೆಯುತ್ತಿವೆ.

ಕೃಷಿ ವಿವಿ ಅಭಿವೃದ್ಧಿ ಪಡಿಸಿದ ಬಾಟಲ್ ಬದನೆಯನ್ನು ಒಂದು ಹೆಕ್ಟರ್ ಪ್ರದೇಶದಲ್ಲಿ 75 ರಿಂದ 80 ಗ್ರಾಂ ಬೀಜ ಬಿತ್ತನೆ ಮಾಡಬೇಕು. ಇದನ್ನು ನಾಟಿ ಮಾಡಿದ ಎರಡುವರೆ ತಿಂಗಳ ಬಳಿಕ ಹೂ ಬಿಡಲು ಆರಂಭಿಸುತ್ತದೆ. ನಾಲ್ಕರಿಂದ ಆರು ತಿಂಗಳವರೆಗೂ ಕಟಾವು ಮಾಡಬಹುದಾಗಿದೆ.

ಇದರ ಕಾಯಿ ಬಹಳ ದಪ್ಪವಾಗಿ ಬೆಳೆಯುವುದರಿಂದ ಗಿಡಕ್ಕೆ ಆಸರೆಯಾಗಿ ಕಡ್ಡಿಯನ್ನು ನೆಟ್ಟು ದಾರ ಕಟ್ಟಬೇಕಾಗುತ್ತದೆ. ಇತರ ಬದನೆಯು ಸಾಮಾನ್ಯವಾಗಿ 300 ಗ್ರಾಂನಷ್ಟು ತೂಕ ಹೊಂದಿರುತ್ತದೆ. ಆದರೆ, ಈ ಬಾಟಲ್ ಬದನೆಯು ಪ್ರತಿ ಕಾಯಿ ಅರ್ಧ ಕೆಜಿಯಿಂದ ಒಂದುವರೆ ಕೆಜಿಯಷ್ಟು ತೂಕ ಬರಲಿದೆ. ಒಂದು ಹೆಕ್ಟರ್‌ಗೆ 150 ರಿಂದ 160ರಷ್ಟು ಇಳುವರಿ ಬರುತ್ತದೆ. ಇದರಿಂದ ರೈತರಿಗೆ ಉತ್ತಮ ಆದಾಯಗಳಿಸಬಹುದಾಗಿದೆ.


ಆಕರ್ಷನಿಯ ಚೆರ್ರಿ ಟೊಮೆಟೊ: ಚೆರ್ರಿ ಟೊಮೆಟೊ ವಿದೇಶಿ ತಳಿಯಾಗಿದ್ದು, ಇದನ್ನು ನಾಟಿ ಮಾಡಿದ 160 ರಿಂದ 180 ದಿನದಲ್ಲಿ ಕಟಾವು ಮಾಡಬಹುದಾಗಿದೆ. ಒಂದು ಹೆಕ್ಟರ್ ಪ್ರದೇಶದಲ್ಲಿ 60 ರಿಂದ 65 ಗ್ರಾಂ ಬೀಜ ಬಿತ್ತನೆ ಮಾಡಬಹುದು. ಇತರ ಟೊಮೆಟೊಗಳ ಆಕಾರ ದೊಡ್ಡದಾಗಿರುತ್ತದೆ. ಆದರೆ, ಇದು ಚೆರ್ರಿಯಂತೆ ಗುಂಡು ಗುಂಡಾಗಿ ಅತ್ಯಂತ ಚಿಕ್ಕದಾಗಿ ಸುಂದರವಾಗಿದೆ. ಆದ್ದರಿಂದ ಇದಕ್ಕೆ ಚೆರ್ರಿ ಟೊಮೆಟೊ ಹೆಸರಿಡಲಾಗಿದೆ. ಇವು ಸಾಂಬಾರು, ಸಲಾಡ್ ಮುಂತಾದವುಗಳಿಗೆ ಹೆಚ್ಚು ಪ್ರಮಾಣದಲ್ಲಿ ಬಳಕೆಯಾಗಲಿವೆ.

ಇದರ ಮಾರುಕಟ್ಟೆಯ ದರವು ಹೆಚ್ಚಿನ ಸಂದರ್ಭದಲ್ಲಿ ಒಂದೇ ರೀತಿಯಲ್ಲಿ ಇರಲಿದೆ. ಇತರ ಟೊಮೆಟೊ ಕೆ.ಜಿ.ಯೊಂದಕ್ಕೆ 30 ರೂ.ಗೆ ಮಾರಾಟ ಮಾಡುತ್ತಾರೆ. ಆದರೆ, ಈ ಚೆರ್ರಿ ಟೊಮೆಟೊ 50 ರಿಂದ 70 ರೂ. ಮಾರಾಟವಾಗುತ್ತದೆ. ಇದರಿಂದ ಒಂದು ಹೆಕ್ಟರ್‌ಗೆ 40 ರಿಂದ 50 ಟನ್ ಇಳುವರಿ ಪಡೆಯಬಹುದಾಗಿದೆ ಎಂದು ಜಿಕೆವಿಕೆ ಕೃಷಿ ವಿವಿ ತೋಟಗಾರಿಕಾ ವಿಭಾಗದ ಪ್ರಾಧ್ಯಾಪಕ ಡಾ.ಕೆ.ಎನ್.ಶ್ರೀನಿವಾಸಪ್ಪ ತಿಳಿಸಿದರು.



18-11-2023
Udayavani- Pg 01 & 02


ಪ್ರಾತ್ಯಕ್ಷಿಕೆ ತಾಕಿನಲ್ಲಿ ಮಗುವಿಗೆ ಹೂ ತೋರಿಸುತ್ತಿರುವುದು.


ವಿದ್ಯಾರ್ಥಿನಿಯರು ಸೂರ್ಯಕಾಂತಿ ಬೆಳೆ ವೀಕ್ಷಿಸಿದರು.


ಭೋಜನಾಲಯದಲ್ಲಿ ಮುದ್ದೆ ಊಟ ಸವಿದ ಸಾರ್ವಜನಿಕರು.


ಸೂರ್ಯಕಾಂತಿ ಬೆಳೆ ಜತೆ ಸೆಲ್ಫಿ ಕ್ಲಿಕ್ಕಿಸಿಕೊಳ್ಳುತ್ತಿರುವ ಯುವತಿಯರು.

1.31 ಲಕ್ಷ ಜನ ಭೇಟಿ, 80 ಲಕ್ಷ ರೂ. ವಹಿವಾಟು

ವಾರಾಂತ್ಯ ರಜೆ ಹಿನ್ನೆಲೆ ಇಂದು ಸಾರ್ವಜನಿಕರ ಸಂಖ್ಯೆ ದ್ವಿಗುಣ ನಿರೀಕ್ಷೆ

ಗಮನ ಸೆಳೆಯುವ 650ಕ್ಕೂ ಅಧಿಕ ಮಳಿಗೆಗಳು, ಹೊಸ ತಳಿಗಳ ಬಿಡುಗಡೆ

ಮುದ್ದೆ ಊಟ ಸವಿದ 8,000 ರೈತರು, ಸಿರಿಧಾನ್ಯ ಆಹಾರೋತ್ಪನ್ನಗಳ ಖರೀದಿ





ಕೃಷಿ ಮೇಳದಲ್ಲಿ ಪಾಲ್ಗೊಂಡ ಜನಸ್ತೋಮ.

ಯೋಜನೆಗಳ ಮಾಹಿತಿ ಪ್ರದರ್ಶನ

ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆ ಹಾಗೂ ಜನತಾದರ್ಶನ, ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ, ಇಂದಿರಾ ಕ್ಯಾಂಟೀನ್ ಮರು ಪ್ರಾರಂಭ, ಕ್ಷೀರಭಾಗ್ಯಕ್ಕೆ ಹತ್ತರ ಸಂಭ್ರಮ, ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆ ಬ್ಯಾಂಡ್ ಬೆಂಗಳೂರು, ಸಾಮಾಜಿಕ ಮಾಧ್ಯಮ ನಿರ್ವಹಣಾ ಕೋಶ ನೇರಿದಂತೆ ಹಲವು ಪ್ರಮುಖ ಕಾರ್ಯಕ್ರಮಗಳ ಕುರಿತು ಮಾಹಿತಿ ಪ್ರದರ್ಶನ ಮಾಡಲಾಗಿದೆ. ಮಾಹಿತಿ ಪ್ರದರ್ಶನ ಮಳಿಗೆಯಲ್ಲಿ ಭಾರತ ರತ್ನ ಪಡೆದ ಕನ್ನಡಿಗರು, ಕರ್ನಾಟಕದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು, ಕರ್ನಾಟಕ ರತ್ನ ಪುರಸ್ಕೃತರು, ಭಾರತವನ್ನು ಚಂದ್ರನ ಅಂಗಳಕ್ಕೆ ತಲುಪಿಸಿದ ಇಸ್ರೋ ವಿಜ್ಞಾನಿಗಳಿಗೆ ಸರ್ಕಾರ ಅಭಿನಂದಿಸಿ ಸಲ್ಲಿಸಿರುವ ಗೌರವ, ಭಾರತದ ಸಂವಿಧಾನ ಪೀಠಿಕೆಯ ಜಾಗತಿಕ ವಾಚನದ ವಿಶ್ವದಾಖಲೆ, ಕರ್ನಾಟಕ 50ರ ಸಂಭ್ರಮ ವಿಷಯಗಳ ಮಾಹಿತಿಗಳನ್ನೂ ಪ್ರದರ್ಶನಕ್ಕೆ ಇಡಲಾಗಿತ್ತು.



ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಹಮ್ಮುಕೊಂಡ ನಾಲ್ಕು ದಿನಗಳ ಕೃಷಿ ಮೇಳಕ್ಕೆ ಶುಕ್ರವಾರ ಚಾಲನೆ ದೊರಕಿದ್ದು ಇದೇ ವೇಳೆ ಹೊಸ ತಳಿಗಳನ್ನು ಲೋಕಾರ್ಪಣೆಗೊಳಿಸಲಾಯಿತು.

ಕೃಷಿ ಮೇಳದ ಮೊದಲ ದಿನವಾದ ಶುಕ್ರವಾರ ಸುಮಾರು 1.31 ಲಕ್ಷ ರೈತರು ಹಾಗೂ ಸಾರ್ವಜನಿಕರು ಭಾಗಿಯಾಗಿದ್ದರು. ಅವರಲ್ಲಿ ಸುಮಾರು 8,000 ಮಂದಿ ರೈತರು ಕೃಷಿ ವಿವಿಧೆಯಾತಿ ದರದ ಆಹಾರವನ್ನು ಭೋಜನಾಲಯದಲ್ಲಿ ಸ್ವೀಕರಿಸಿದರು. ಮೇಳದಲ್ಲಿ 80 ಲಕ್ಷ ರೂ. ವಹಿವಾಟಾಗಿದೆ. ಶನಿವಾರ ಹಾಗೂ ಭಾನುವಾರ ವಾರಾಂತ್ಯದ ರಜೆ ಹಿನ್ನೆಲೆಯಲ್ಲಿ ಕೃಷಿ ಮೇಳಕ್ಕೆ ಆಗಮಿಸುವವರ ಸಂಖ್ಯೆ ಹಾಗೂ ವಹಿವಾಟು ದ್ವಿಗುಣಗೊಳ್ಳುವ ನಿರೀಕ್ಷೆಯಿದೆ.

ನೆಟ್‌ವರ್ಕ್ ಜಾಮ್: ಕೃಷಿ ಮೇಳದಲ್ಲಿ 650ಕ್ಕೂ ಅಧಿಕ ಮಳಿಗೆಗಳನ್ನು ತೆರೆಯಲಾಗಿತ್ತು. ಆದರೆ ಯಾವ ಮಳಿಗೆಯಲ್ಲಿಯೂ ಡಿಜಿಟಲ್ ಪಾವತಿಗೆ ಅವಕಾಶವಿರಲಿಲ್ಲ. ಏಕೆಂದರೆ ಮೇಳದ ಸುತ್ತಮುತ್ತಲಿನ ಪ್ರದೇಶದಲ್ಲಿ ಮೊಬೈಲ್ ನೆಟ್‌ವರ್ಕ್ ಇರಲಿಲ್ಲ. ಇದರಿಂದಾಗಿ ಕೆಲವರು ನಗದು ಪಾವತಿ ಮಾಡಿ ವಸ್ತುಗಳನ್ನು ಖರೀದಿಸಿದ್ದರೆ, ಇನ್ನೂ ಕೆಲವರು ಡಿಜಿಟಲ್ ಪಾವತಿಗೆ ಸಾಧ್ಯವಾದೇ ಪರದಾಡುವ ಪರಿಸ್ಥಿತಿ ಎದುರಾಗಿತ್ತು.

ಸಿರಿಧಾನ್ಯ ಐಸ್‌ಕ್ರೀಂ: ಕೇಂದ್ರ ಸರ್ಕಾರ ಸಿರಿಧಾನ್ಯ ವರ್ಷಾಚರಣೆಯ ಘೋಷಣೆಯ ಹಿನ್ನೆಲೆಯಲ್ಲಿ ಮೇಳದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಸಿರಿಧಾನ್ಯ ಉತ್ಪನ್ನಗಳು ಕಂಡು ಬಂತು. ಜಿಕೆವಿಕೆ ವಿಶೇಷವಾಗಿ ಸಿರಿಧಾನ್ಯ ಕೃಷಿ ಜಾವಡಿಯನ್ನು ನಿರ್ಮಿಸಿದ್ದು ಸಾರ್ವಜನಿಕರ ಗಮನ ಸೆಳೆಯಿತು. ಜತೆಗೆ ಸಿರಿಧಾನ್ಯದ ಆಹಾರೋತ್ಪನ್ನಗಳು, ಐಸ್ಕ್ರೀಂ ಸ್ಟಾಂಪಲ್‌ಗಳನ್ನು ಉಚಿತವಾಗಿ ಸವಿದ ಸಾರ್ವಜನಿಕರು ತದನಂತರ ಅಗತ್ಯವಿದ್ದಷ್ಟು ಪ್ರಮಾಣದ ಸಿರಿಧಾನ್ಯ ಆಹಾರೋತ್ಪನ್ನ ಖರೀದಿಸುವ ದೃಶ್ಯಗಳು ಕಂಡು ಬಂತು.

ಸುಸ್ತಾದ ಜನರು: ಕೃಷಿ ಮೇಳ ವೀಕ್ಷಣೆಗೆ ಅತ್ಯಂತ ಉತ್ಸಾಹದಿಂದ ಬಂದ ಸಾರ್ವಜನಿಕರು ಮಳಿಗೆ ಸುತ್ತು ಹಾಕಿ ಹಿಂದಿರುವಾಗ ಸುಸ್ತಾದಂತೆ ಕಂಡ ಬಂದರು. ಜಿಕೆವಿಕೆ ಮೇಳದಿಂದ ಕಾಲೇಜಿನ ಮುಂಭಾಗದ ಗೇಟಿನವರೆಗೆ ಹೋಗಲು ಆಗತ್ಯವಿರುವ ಸಾರಿಗೆ ವ್ಯವಸ್ಥೆ ಇಲ್ಲದೆ ಪರದಾಡುವಂತಾಗಿದೆ. ಕಿ.ಮೀ. ದೂರ ನಡೆದುಕೊಂಡು ಬಂದು ಬಸ್ ನಿಲ್ದಾಣ ತಲುಪಿದರು. ಇನ್ನೂ ಕೆಲ ಆನ್‌ಲೈನ್ ಕ್ಯಾಬ್ ಹಾಗೂ ಆಟೋ ಸೇವೆಗಳು ಹೆಬ್ಬಾಳ ಜಿಕೆವಿಕೆ ಎಂದಾಕ್ಷಣವೇ ಟ್ರಿಪ್ ರದ್ದುಗೊಳಿಸಿರುವುದು ವರದಿಯಾಗಿದೆ. ಕೃಷಿ ಮೇಳದ ಜಿಕೆವಿಕೆ ಹಾಗೂ ಮಾರಾಟ ಮಳಿಗೆಗಳು ವಿವಿಧ ಬಗೆಯ ಹೂವಿನ, ಸಿರಿಧಾನ್ಯದ ಸಂದೇಶ ಸಾರುವ ಸೆಲ್ಫಿ ಪಾಯಿಂಟ್‌ಗಳನ್ನು ಆಲ್ಲಲ್ಲಿ ನಿರ್ಮಿಸಲಾಗಿತ್ತು. ಮೇಳಕ್ಕೆ ಭೇಟಿ ನೀಡಿದ ಸಾರ್ವಜನಿಕರು ಸೆಲ್ಫಿ ಪಾಯಿಂಟ್‌ನತ್ತ ಮುಗಿ ಬಿದ್ದು ಫೋಟೋ ತೆಗೆಸಿಕೊಳ್ಳುವ ದೃಶ್ಯಗಳು ಕಂಡು ಬಂತು.

ಉದ್ದನೆ ಕಿವಿಯುಳ್ಳ ಒಂದು ಮೇಕೆ ಬೆಲೆ 2 ಲಕ್ಷ ರೂ.!

ಒಂದು ಮೇಕೆ ಬೆಲೆ ಎಷ್ಟಿರಬಹುದು? 10 ಸಾವಿರ ರೂ. ಅಬ್ಬಬ್ಬಾ ಎಂದರೆ 50 ಸಾವಿರ ರೂ. ಆದರೆ, ಕೃಷಿ ಮೇಳದಲ್ಲಿ ಪ್ರದರ್ಶನಕ್ಕಿರುವ ಉದ್ದನೆಯ ಕಿವಿಯುಳ್ಳ ಒಂದು ಮೇಕೆ ಬೆಲೆ ಎರಡು ಲಕ್ಷ ರೂ.!



ಭಾರಿ ಬೇಡಿಕೆ ಇದೆ. ತಮ್ಮ ಕಿವಿಗಳಿಂದಲೇ ಈ ಮೇಕೆಗಳು ಪ್ರೇಕ್ಷಕರನ್ನು ಸೆಳೆಯುತ್ತಿವೆ. ಸಾಮಾನ್ಯವಾಗಿ ಈ ತಳಿಯ ಮೇಕೆ ಕಿವಿಗಳು 10 ಇಂಚು ಉದ್ದ ಇರುತ್ತವೆ. ಆದರೆ, ಬೆಂಗಳೂರಿನಲ್ಲಿ ಅಭಿವೃದ್ಧಿಪಡಿಸಿದ ಈ ಮೇಕೆಗಳ ಕಿವಿಗಳು ಉದ್ದದಷ್ಟಿದ್ದು ನಗರದಲ್ಲಿ ಒಟ್ಟಾರೆ ಅಂದಾಜು 800 ಉದ್ದ ಕಿವಿ ಮೇಕೆಗಳು ಇವೆ. ಹೆಣ್ಣು ಮತ್ತು ಗಂಡು ಮೇಕೆಗಳ ಬೆಲೆ ಕ್ರಮವಾಗಿ ಒಂದೂವರೆಯಿಂದ ಎರಡು ಲಕ್ಷರೂ. ಆಗಿದೆ. ಮೇಳದಲ್ಲಿ ಮೊದಲ ದಿನವೇ ಹಲವರು ಖರೀದಿಗೆ ಆಸಕ್ತಿ ತೋರಿಸಿದ್ದಾರೆ. ಎಷ್ಟು ಜನ ಖರೀದಿಸಲು ಬುಕಿಂಗ್ ಮಾಡಿದ್ದಾರೆ ಎಂಬುದು ಈಗಲೇ ನಿಖರವಾಗಿ ಹೇಳುವುದು ಕಷ್ಟವೆಂದು ಸಂಘದ ಸಲಹೆಗಾರ ಶಾಮೀರ್ ಖುರೇಷಿ ತಿಳಿಸಿದರು.

ಹಳ್ಳೀಕಾರ್ ಎತ್ತುಗಳ ಜತೆ ಸೆಲ್ಫೀ

ಈಚೆಗೆ ಸಾಕಷ್ಟು ಸುದ್ದಿಯಲ್ಲಿರುವ ವರ್ತೂರು ಸಂತೋಷ್ ಬಿಗ್‌ಬಾಸ್ ಮನೆ ಸೇರಿರುವುದರಿಂದ ಮೇಳದಲ್ಲಿ ಕಾಣಿಸಲಿಲ್ಲ, ಆದರೆ, ಅವರ ಹಳ್ಳೀಕಾರ್ ಜೋಡೆತ್ತುಗಳು ಮಾತ್ರ ಗಮನ ಸೆಳೆದವು. ಮೇಳಕ್ಕೆ ಭೇಟಿ ನೀಡಿದವರು ಹಾನುವಾರುಗಳರುವ ಅವರ ಹಳ್ಳೀಕಾರ್ ಎತ್ತುಗಳನ್ನು ನೋಡಿ, ಅವುಗಳೊಂದಿಗೆ ಒಂದು ಸೆಲ್ಫೀ ಕ್ಲಿಕ್ಕಿಸಿಕೊಳ್ಳುತ್ತಿರುವುದು ಕಂಡುಬಂತು. ಈ ವೇಳೆ ಎತ್ತುಗಳನ್ನು ತಂದಿದ್ದ ಸಂತೋಷ್ ಅಭಿಮಾನಿ, 'ಸಂತೋಷಣ್ಣ ಬಿಗ್‌ಬಾಸ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾನೆ. ಮೊದಲೇ ನನಗೆ ನೋಟಿಸ್ದಿಂದ ಮೇಳಕ್ಕೆ ಎತ್ತುಗಳನ್ನು ಕರೆತಂದಿದ್ದೇನೆ. ಆವರೂಪದ ತಳಿ ಆಗಿದ್ದರಿಂದ ಸಹಜವಾಗಿ ಲಕ್ಷಾಂತರ ರೂಪಾಯಿ ಬೆಲೆಬಾಳುತ್ತವೆ' ಎಂದರು.

ಖಡಕ್‌ನಾಥ್ ಕೋಳಿಗಳ ಆಕರ್ಷಣೆ

ಎಂದಿನಂತೆ ಈ ವರ್ಷವೂ ಖಡಕ್‌ನಾಥ್ ಕೋಳಿಗಳು ಮೇಳದಲ್ಲಿ ಗಮನ ಸೆಳೆದಿವೆ. ಕಾಡುಕೋಳಿಗಳು ಎಂದೂ ಕರೆಯಲ್ಪಡುವ ಈ ಕೋಳಿಗಳ ಬಣ್ಣಕಡುಕಪ್ಪು ಕಣ್ಣು ಬಾಲ ಅಷ್ಟೇ ಯಾಕೆ, ರಕ್ತ-ಮಾಂಸ ಕೂಡ ಕಪ್ಪು (ವಾಸ್ತವವಾಗಿ ಕಡುಗೆಂಪು) ಆಗಿದೆ. ಜಾಹುವಾರು ಮಳಿಗೆಗಳಲ್ಲಿರುವ ವಿಭಾಗಕ್ಕೆ ಭೇಟಿ ನೀಡುವ ಜನ, ಖಡಕ್‌ನಾಥ್ ಕೋಳಿಗಳನ್ನು ಹುಡುಕಿಕೊಂಡು ಹೋಗುತ್ತಿರುವುದು ಕಂಡುಬಂತು. ಎರಡರೇ ದಿನ ಪೊಲೀಸ್ ಕ್ಯಾಪ್ ಸೇರಿದಂತೆ ಸಾವಿರಾರು ರೂಪಾಯಿ ಬೆಲೆಬಾಳುವ ಕೋಳಿಗಳು ಪ್ರದರ್ಶನಕ್ಕೆ ಬಂದಿಳಿಯಲಿವೆ ಎಂದೂ ತಿಳಿದುಬಂದಿದೆ.



ಸಿರಿಧಾನ್ಯಗಳ ಕೇಕ್ ತಯಾರಿಸಿ, ಸವಿದ ಜನ

ಸಿರಿಧಾನ್ಯ ವರ್ಷವಾಗಿರುವುದರಿಂದ ಮೇಳದಲ್ಲಿ ವಿಶೇಷ ವೇದಿಕೆ ಕಲ್ಪಿಸಲಾಗಿದೆ. ಸಜ್ಜೆ ರಾಗಿ, ನವಣೆ ಮತ್ತಿತರ ಧಾನ್ಯಗಳಿಂದ ಕೇಕ್, ಬಿಸ್ಕತ್ತು ಮತ್ತಿತರ ಬೇಕರಿ ಉತ್ಪನ್ನಗಳನ್ನು ತಯಾರಿಸುವುದರ ಜತೆಗೆ ಅವುಗಳನ್ನು ಸವಿಯಲು ಅವಕಾಶ ಕಲ್ಪಿಸಲಾಗಿದೆ. ಹಾಗಾಗಿ, ಮೇಳದಲ್ಲಿ ಜಿಕೆವಿಕೆಯ ಬೇಕರಿ ಉತ್ಪನ್ನಗಳ ಮಳಿಗೆಗೆ ಭೇಟಿ ನೀಡಿದ ಯುವಕ-ಯುವತಿಯರು, ಮಹಿಳೆಯರು, ತಮ್ಮ ಕೈಯಿಂದಲೇ ಸಿರಿಧಾನ್ಯಗಳ ಕೇಕ್ ತಯಾರಿಸಿ, ಅದರ ರುಚಿ ಸವಿದರು. ಈ ಸಂದರ್ಭದಲ್ಲಿ ತಾವು ತಯಾರಿಸುತ್ತಿರುವ ವಿಡಿಯೋ ಚಿತ್ರೀಕರಣ, ಸಿದ್ಧಪಡಿಸಿದ ಬಣ್ಣ-ಬಣ್ಣದ ಕೇಕ್‌ನೊಂದಿಗೆ ಸೆಲ್ಫೀ ತೆಗೆದುಕೊಂಡು ಸಂಭ್ರಮಿಸಿದರು.

ಕೃಷಿ ಮೇಳದಲ್ಲೂ ವಿನ್ಯಾಸ ಮುತ್ತಿನ ಕೃಷಿಗೆ ಇಲಾಖೆ ಒತ್ತು

ಕಡಿಮೆ ಅವಧಿಯಲ್ಲಿ ಸಿಗಲಿದೆ ಅತ್ಯಧಿಕ ಲಾಭ

ಒಂದು ಮುತ್ತಿನ ಕೃಷಿಗೆ ರಾಜ್ಯದ ಒಲವು

• ತೃಪ್ತಿ ಕುಮ್ರಗೋಡು

ಬೆಂಗಳೂರು: ರಾಜ್ಯದಲ್ಲಿ ಜೇನು, ಕುರಿ, ಮೊಲ, ಕೋಳಿ, ಕೇಟ, ಮೀನು ಸಾಕಣೆಯಂತೆ 'ಸಿಹಿ ನೀರಿನ ಮುತ್ತಿನ' ಕೃಷಿ ದಿನದಿಂದ ದಿನಕ್ಕೆ ಜನಪ್ರಿಯವಾಗುತ್ತಿದ್ದು ಯುವ ಸಮುದಾಯ ಹೆಚ್ಚಿನ ಒಲವು ತೋರಿಸುತ್ತಿದೆ.

ಜಾಗತಿಕ ಮಟ್ಟದಲ್ಲಿ ಮಿಂಚುವ ಮುತ್ತಿನ ಹಾರಕ್ಕೆ ಭಾರೀ ಬೇಡಿಕೆ ಇದೆ. ಆಭರಣ ತಯಾರಿಕೆಯಲ್ಲಿಮುತ್ತುಗಳನ್ನು ಹೇರಳವಾಗಿ ಬಳಸಲಾಗುತ್ತದೆ. ಹೈದ್ರಾಬಾದ್ ಮುತ್ತಿನ ನಗರವಾಗಿ ಗುರುತಿಸಿಕೊಂಡರೂ ಅಲ್ಲಿ ಮುತ್ತು ಬೆಳೆಯುವವರ ಸಂಖ್ಯೆ ತೀರಾ ಕಡಿಮೆ. ಪ್ರಸ್ತುತ ಕರ್ನಾಟಕದಲ್ಲಿ ವಿನ್ಯಾಸ ಭರಿತ ಮುತ್ತಿನ ಕೃಷಿ ಒಲವು ಪ್ರಾರಂಭಗೊಂಡಿದೆ. ಇವುಗಳನ್ನು ಗುಂಡಿ ಯಲ್ಲಿ ಮಾತ್ರವಲ್ಲದೆ ಜಾಗದ ಕೊರತೆ ಇದ್ದವರು ಟಬ್, ಸಿಮೆಂಟ್‌ನಿಂದ ತಯಾರಿಸಿದ ತೊಟ್ಟಿಗಳಲ್ಲಿ ಬೆಳೆಯಬಹುದಾಗಿದೆ.

ತಯಾರಿಕೆ ಹೇಗೆ?: ಪ್ರತಿ 10 ಲೀ. ನೀರಿಗೆ 1 ಕಪ್ಪೆ ಚಿಪ್ಪನ್ನು ಬಿಟ್ಟು ಆಹಾರಕ್ಕೆ ಪ್ಲಾಂಕ್ಟನ್ ಸತ್ವವನ್ನು ಕೊಳದಲ್ಲಿ ಬೆಳೆಯುವಂತೆ ಮಾಡ ಬೇಕು. ಕೆಲ ದಿನಗಳ ಬಳಿಕ ನೀರಿಗೆ ಮೆಂಥಾಲ್ ಪುಡಿ ಬೆರೆಸಿ ದಾಗ ಕಪ್ಪೆಚಿಪ್ಪುಗಳು ಅರೆಪ್ರಜ್ಞಾವಸ್ಥೆಗೆ ಹೋಗುತ್ತವೆ. ಈ ವೇಳೆ ದಂತ ಚಿಕಿತ್ಸೆಗೆ ಉಪಯೋಗಿಸುವ ಕೋಲ್ಡ್ ಕ್ಯೂರಿಂಗ್ ಅಕ್ರೈಲಿಕ್ ಪುಡಿ, ದ್ರಾವಣವನ್ನು ಮೂಲ ವಸ್ತುವಾಗಿ ತಯಾರಿಸಿ



> ಸಿಹಿ ನೀರಿನ ಮುತ್ತಿನ ಕೃಷಿಯತ್ತ ಯುವಕರ ಒಲವು ಹೆಚ್ಚಿದೆ. ಆಗತ್ಯ ತರಬೇತಿಯನ್ನು ಬೆಂಗಳೂರಿನಲ್ಲಿ ನೀಡಲಾಗುತ್ತಿದೆ. ಈಗಾಗಲೇ 15 ಮಂದಿಯ 6 ಬ್ಯಾಚ್‌ಗಳ ರೈತರು ತರಬೇತಿ ಪಡೆದು ಮುತ್ತಿನ ಕೃಷಿ ಆರಂಭಿಸಿದ್ದಾರೆ. ಸಾಮಾನ್ಯವಾಗಿ ಒಂದು ಕಪ್ಪೆಚಿಪ್ಪಿನಲ್ಲಿ 2 ಮುತ್ತುಗಳನ್ನು ಬೆಳೆಯಬಹುದು.
>
> • ಡಾ. ವೆಂಕಟಪ್ಪ ಸಹಾಯಕ ಪ್ರಾಧ್ಯಾಪಕ, ಒಳನಾಡು ಮೀನುಗಾರಿಕೆ ಜಿಕೆವಿಕೆ

ಬೇಕಾದ ವಿನ್ಯಾಸ ಆಚ್ಚುಗಳೊಂದಿಗೆ ಉಪಯೋಗಿಸಿಕೊಂಡು ಕಪ್ಪೆಚಿಪ್ಪಿನೊಳಗೆ ತೂರಿಸಬೇಕು. ಆ ಚಿಪ್ಪನ್ನು ನೀರಿನ ಆಕ್ಸೇರಿಯಂ ಒಳಕ್ಕೆ ಬಿಟ್ಟು ಆ್ಯಂಟಿಬಯೋಟಿಕ್ ದ್ರಾವಣ ಸೇರಿಸಬೇಕು. ಜತೆ ಗೆ ಸಿಹಿ ನೀರಿನ ಮೀನುಗಳನ್ನು ಕೂಡ ಸಾಕಬಹುದಾಗಿದೆ.

ಲಾಭ ಹೆಚ್ಚು!: ಸಿಹಿ ನೀರಿನಲ್ಲಿ ಸಲ್ಯಾಮೆಲ್ಲಿಡೆನ್ಸ್ ಮಾರ್ಜಿನಾಲಿಸ್, ಲ್ಯಾಮೆಲ್ಲಿಡೆನಸ್ ಕೋರಿಯನಸ್, ಪರ್ಲೆಷಿಯಾ ಕೊರುಗಾಟ ಜಾತಿಯ ಕಪ್ಪೆ ಚಿಪ್ಪು ಬಳಸಿಕೊಂಡು ಮುತ್ತು ಕೃಷಿ ಮಾಡಬಹುದು. ಅಕ್ರೆಲಿಕ್ ಬಳಸಿ ನಿರ್ಮಿಸಲಾಗುವ ವಿನ್ಯಾಸದ ಮುತ್ತಿಗೆ 8ರಿಂದ 10 ತಿಂಗಳ ಅವಧಿ ಆಗತ್ಯವಿದೆ. ವೃತ್ತಾಕರದ ಮುತ್ತು ಪಡೆಯಲು ಅತ್ಯಧಿಕ ಸಮಯ ತಗಲುತ್ತದೆ. ವಿನ್ಯಾಸ, ವೃತ್ತಾಕರದ ಮುತ್ತನ್ನು ಒಂದೇ ಚಿಪ್ಪಿನಲ್ಲಿ ಬೆಳೆಸಬಹುದು.

ಪ್ರಯೋಜನವೇನು?: ಪ್ರಸ್ತುತ ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾಗಿ ಹಲವು ವಿನ್ಯಾಸ ಭರಿತ ಮುತ್ತುಗಳನ್ನು ರೈತರು ಸಹ ಬೆಳೆಯಬಹುದು. ಅತ್ಯಧಿಕ ಲಾಭವನ್ನೂ ಪಡೆಯಬಹುದು. ಕಪ್ಪೆಚಿಪ್ಪಿನ ಹೊರ ಕವಚಗಳನ್ನು ಬೇರ್ಪಡಿಸಿದಾಗ ಕೃತಕ ಸಿಹಿ ನೀರಿನ ಮುತ್ತುಗಳು ದೊರೆಯುತ್ತವೆ. ವಿನ್ಯಾಸಾಕೃತಿ ಮುತ್ತನ್ನು ಚಿನ್ನ ಬೆಳ್ಳಿ ಪದಕವನ್ನಾಗಿ ಉಪಯೋಗಿಸಬಹುದು.

ತರಬೇತಿ ಲಭ್ಯವಿದೆ: ಬೆಂಗಳೂರು ಕೃಷಿ ವಿವಿಯ ಒಳನಾಡು ಮೀನುಗಾರಿಕೆ ಇಲಾಖೆ ಸಿಹಿ ನೀರಿನ ಮುತ್ತಿನ ಕೃಷಿ ಮಾಡುವವರಿಗೆ ತರಬೇತಿ ನೀಡುತ್ತಿದೆ. ಯಾವ ರೀತಿ ಮುತ್ತಿನ ಕೃಷಿ ಮಾಡಬೇಕು. ಯಾವೆಲ್ಲ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು ಎನ್ನುವ ಸಂಪೂರ್ಣ ಮಾಹಿತಿ ನೀಡಲಿದ್ದಾರೆ.

ಪ್ರಜಾವಾಣಿ
ಭಾನುವಾರ • ನವೆಂಬರ್ 18, 2023
ಬೆಂಗಳೂರು ನಗರ 5B

ಕೃಷಿ ಸೊಬಗು 'ಸಿರಿಧಾನ್ಯ'ದ ಬೆರಗು

ಕೃಷಿ ಮೇಳಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ • ರೋಗ ನಿರೋಧಕ ಶಕ್ತಿಯ ತಳಿಗಳ ಆವಿಷ್ಕಾರಕ್ಕೆ ಕರೆ

ಬರ: ರೈತರಿಗೆ ₹16 ಸಾವಿರ ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಳೆ ವಿಮೆ ಪಾವತಿಸಿದ್ದರೂ ರೈತರಿಗೆ ಪೂರ್ಣ ಪ್ರಮಾಣದಲ್ಲಿ ಬೆಳೆ ನಷ್ಟ ಪರಿಹಾರ ದೊರೆಯುತ್ತಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ಶುಕ್ರವಾರದಿಂದ ಆರಂಭವಾದ ಕೃಷಿ-ಮೇಳ-2023ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ರೈತರಿಗೆ ಸರ್ಕಾರವು ಸಹಾಯಧನ ನೀಡಬಹುದು. ಆದರೆ, ಬೆಳೆನಷ್ಟಕ್ಕೆ ಪೂರ್ಣ ಪ್ರಮಾಣದಲ್ಲಿ ಪರಿಹಾರ ಒದಗಿಸಲು ಸಾಧ್ಯವಾಗುತ್ತಿಲ್ಲ. ವಿಮಾ ಕಂಪನಿಗಳೂ ಪೂರ್ಣ ಪ್ರಮಾಣದಲ್ಲಿ ಬೆಳೆ ಪರಿಹಾರ ನೀಡುತ್ತಿಲ್ಲ' ಎಂದು ಹೇಳಿದರು.

'ಮುಂಗಾರು ಕೈಕೊಟ್ಟ ಪರಿಣಾಮ ರಾಜ್ಯದಲ್ಲಿ ₹ 33 ಸಾವಿರ ಕೋಟಿಗೂ ಹೆಚ್ಚು ಮೌಲ್ಯದ ಬೆಳೆ ನಷ್ಟವಾಗಿದೆ. ಆದರಲ್ಲಿ ಎನ್‌ಡಿಆರ್‌ಎಫ್ ಅಡಿ, ₹17,900 ಕೋಟಿಯಷ್ಟು ಪರಿಹಾರ ನೀಡಲು ಮಾತ್ರ ಸಾಧ್ಯವಾಗಲಿದೆ. ಅಂದರೆ ರೈತರಿಗೆ ₹16 ಸಾವಿರ ಕೋಟಿಯಷ್ಟು ಬೆಳೆ ನಷ್ಟವಾಗುತ್ತಿದೆ. ಈ ಮೊತ್ತವನ್ನು ಯಾರೂ ಭರಿಸುತ್ತಿಲ್ಲ' ಎಂದು ಹೇಳಿದರು.

'ಹಸಿರು ಕ್ರಾಂತಿ ನಿರಂತರವಾಗಿ ಆಗಬೇಕು. ಹೊಸ ತಳಿಗಳು, ಮಣ್ಣಿನ ಫಲವತ್ತತೆ, ತಂತ್ರಜ್ಞಾನ, ರೈತರಿಗೆ ನ್ಯಾಯಯುತ ಬೆಲೆ, ಆಹಾರ ಸಂಗ್ರಹಣೆಗೆ ಗೋದಾಮುಗಳು ಆಗಬೇಕು. ಆಗ ಮಾತ್ರ ಸುಸ್ಥಿರವಾದ ಕೃಷಿ ಬೆಳವಣಿಗೆ ಆಗುತ್ತದೆ' ಎಂದು ಹೇಳಿದರು.

'ಬರಗಾಲದ ಸಂದರ್ಭದಲ್ಲಿ ಉತ್ತಮ ಇಳುವರಿ ನೀಡುವ ತಳಿಗಳನ್ನು ಅವಿಷ್ಕರಿಸಿದರೆ ಕೃಷಿ ವಿಶ್ವವಿದ್ಯಾಲಯಗಳಿಗೆ ಹೆಚ್ಚಿನ ಅನುದಾನ ನೀಡಲಾಗುವುದು. ಮಳೆ ನೀರು ಸಂಗ್ರಹಿಸುವ ರೈತರಿಗೆ ಅನುದಾನ ನೀಡಲಾಗುವುದು' ಎಂದು ಭರವಸೆ ನೀಡಿದರು.

'ಕೃಷಿ ವಿಶ್ವವಿದ್ಯಾಲಯಗಳು ಕೇವಲ ಕೃಷಿ ಪದವೀಧರರನ್ನು ತಯಾರು ಮಾಡುವ ಸಂಸ್ಥೆಗಳಲ್ಲ. ಕೃಷಿ ವಿದ್ಯಾರ್ಥಿಗಳನ್ನು ತಯಾರಿಸುವ ಜೊತೆಗೆ ಸಂಶೋಧನೆಗಳಿಗೆ ಒತ್ತು ನೀಡಬೇಕು. ರಾಜಸ್ಥಾನ ಬಿಟ್ಟರೆ ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಒಣಭೂಮಿಯಿದೆ. ಕೃಷಿಯಿಂದ ವಿಮುಖರಾಗುವ ರೈತರ ಸಂಖ್ಯೆ ಹೆಚ್ಚುತ್ತಿದ್ದು, ಕೃಷಿಯನ್ನು ಲಾಭದಾಯಕ ಮಾಡುವತ್ತ ಗಮನ ಹರಿಸಬೇಕು ಎಂದು ಅವರು ಹೇಳಿದರು.

'ಕಡಿಮೆ ನೀರು ಸಾಕಾಗುವ ಹಾಗೂ ರೋಗ ನಿರೋಧಕ ಶಕ್ತಿಯಿರುವ ತಳಿಗಳನ್ನು ಅವಿಷ್ಕಾರ ಮಾಡಬೇಕು' ಎಂದು ಸೂಚನೆ ನೀಡಿದರು.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಕೃಷಿಯನ್ನು ಲಾಭದಾಯಕ ಮಾಡುವತ್ತ ಗಮನ ಹರಿಸಬೇಕು ಎಂದು ಅವರು ಹೇಳಿದರು.

ಶಾಸಕ ಶರತ್ ಬಚ್ಚೇಗೌಡ, ಕುಲಪತಿ ಎಚ್.ಪಿ.ಸುರೇಶ್ ಹಾಗೂ ಇತರ ಅಧಿಕಾರಿಗಳು ಇದ್ದರು.



ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿ ಶುಕ್ರವಾರ ಆರಂಭವಾದ ಕೃಷಿಮೇಳದಲ್ಲಿ (ಎಡದಿಂದ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಿ.ಆರ್‌ಮಂಜುನಾಥ (ಎಚ್ ಡಿ.ದೇವೇಗೌಡ ಆತ್ಮತಮ ರೈತ ಪ್ರಶಸ್ತಿ), ಶಿವಮೊಗ್ಗ ಜಿಲ್ಲೆಯ ಎಚ್‌ಟಿ.ರಾಜೇಂದ್ರ (ಎಂ.ಎಚ್‌ಮರೀಗೌಡ ಆತ್ಮತಮ ತೋಟಗಾರಿಕೆ ರೈತ ಪ್ರಶಸ್ತಿ), ರಾಮನಗರ ಜಿಲ್ಲೆಯ ಬಿ.ಎ.ವಾಸು (ಕ್ಯಾಂ ಬ್ಯಾಂಕ್ ಪ್ರಶಸ್ತಿ), ಕೋಲಾರ ಜಿಲ್ಲೆಯ ಎ.ವಿ.ರತ್ನಮ್ಮ (ಕ್ಯಾನ್ ಬ್ಯಾಂಕ್ ರೈತ ಮಹಿಳಾ ಪ್ರಶಸ್ತಿ), ಹಾಸನ ಜಿಲ್ಲೆಯ ಬಿ.ಜಿ.ಮಂಜೇಗೌಡ (ಆರ್ ಡ್ಡಾಕೇನಾಥ್ ಆತ್ಮತಮ ರೈತ ಪ್ರಶಸ್ತಿ) ಹಾಗೂ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯ ಎಂ.ವಿ.ಧನಂಜಯ್ (ತೋಟಗಾರಿಕೆ ಸಂಶೋಧನಾ ರತ್ನ ಪ್ರಶಸ್ತಿ) ಅವರಿಗೆ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಕುಲಪತಿ ಎಸ್‌ವಿ.ಸುರೇಶ, ಶಾಸಕ ಶರತ್ ಬಚ್ಚೇಗೌಡ, ಸಚಿವ ಚಲುವರಾಯಸ್ವಾಮಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇದ್ದರು — ಪ್ರಜಾವಾಣಿ ಚಿತ್ರ



'ಲಂಚವಿಲ್ಲದ ಕೆಲಸ ರೈತರದ್ದು'

'ಸಂಬಳ, ಬಡ್ತಿ, ನಿವೃತ್ತಿ ವೇತನ, ಲಂಚವಿಲ್ಲದ ಕೆಲಸ ರೈತರದ್ದು. ಕೃಷಿ ಕೆಲಸದಿಂದ ರೈತರಿಗೆ ನಿವೃತ್ತಿ ಎಂಬುದೂ ಇಲ್ಲ. ಹೇಗೋ ರೈತರು ಬದುಕು ನಡೆಸುತ್ತಿದ್ದಾರೆ. ಸರ್ಕಾರಗಳು ರೈತರಿಗೆ ಶಕ್ತಿ ತುಂಬುವ ಕೆಲಸ ಮಾಡಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ನಗರಗಳತ್ತ ರೈತರ ವಲಸೆ ಹೆಚ್ಚಾಗಿದೆ. ಆತ್ಮಹತ್ಯೆ ಮಾಡುತ್ತಿದ್ದಾರೆ. ಗ್ರಾಮೀಣ ಪ್ರದೇಶದಿಂದ ಶೇ 42ರಷ್ಟು ಮಂದಿ ನಗರಗಳತ್ತ ವಲಸೆ ಬಂದಿದ್ದಾರೆ' ಎಂದು ಹೇಳಿದರು.

'ಬರಗಾಲವಿರುವ ಕಾರಣ ನರೇಗಾ ಯೋಜನೆ ಮಾನವ ದಿನಗಳನ್ನು 100 ದಿನಗಳ ಬದಲು 150 ದಿನಗಳಿಗೆ ಏರಿಕೆ ಮಾಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ' ಎಂದು ಹೇಳಿದರು.

'ನಮ್ಮ ರೈತರು ಇಡೀ ದೇಶಕ್ಕೆ ಮಾದರಿ': ನೀರಿನ ಸದ್ಬಳಕೆ ಮತ್ತು ಭೂಮಿಯ ಫಲವತ್ತತೆಯನ್ನು ಕಾಪಾಡುವ ಬಗ್ಗೆ ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಯ ರೈತರು ಇಡೀ ದೇಶಕ್ಕೆ ಮಾದರಿ ಆಗಿದ್ದಾರೆ. ರಾಮನಗರದ ರೈತರಿಗಿಂತ ಈ ಭಾಗದ ರೈತರು ಚೆನ್ನಾಗಿ ಜೀವನ ಕಟ್ಟಿಕೊಂಡಿದ್ದಾರೆ ಎಂದು ಹೇಳಿದರು.



ಏಕಲವ್ಯ ಹಳ್ಳಿಕಾರ್ ಹೋರಿಯನ್ನು ಜನರು ಕುತೂಹಲದಿಂದ ವೀಕ್ಷಿಸಿದರು.

ಏಕಲವ್ಯ ಹಳ್ಳಿಕಾರ್ ಎತ್ತಿನ ಆಕರ್ಷಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ತುರುವೇಕೆರೆಯ ಏಕಲವ್ಯ ಹಳ್ಳಿಕಾರ್ ನಾಟ ಎತ್ತು ಈ ಬಾರಿಯ ಕೃಷಿ ಮೇಳದಲ್ಲಿ ಜನರ ಗಮನ ಸೆಳೆಯುತ್ತಿದೆ.

ಕೃಷಿಮೇಳದ ಪಶುಸಂಗೋಪನಾ ವಿಭಾಗದ ಮಳಿಗೆಯಲ್ಲಿ ಈ ಎತ್ತು ಜನರನ್ನು ಸೆಳೆಯುತ್ತಿದೆ. ಇದರ ವಯಸ್ಸು 4 ವರ್ಷ. ಬೆಲೆ ಬರೋಬ್ಬರಿ ₹ 26 ಲಕ್ಷ.

ತುರುವೇಕೆರೆಯ ಮಾಜಿ ಶಾಸಕ ಮಸಾಲ ಜಯರಾಂ ಅವರು, ಈ ಹಳ್ಳಿಕಾರ್ ಹೋರಿಯನ್ನು ಖರೀದಿಸಿದ್ದರು. ಈ ಹೋರಿಗೆ ಬೇಯಿಸದ ಹುರುಳಿ ನುಚ್ಚು, ರವೆಉಪ್ಪಿ, ಕೊಬ್ಬರಿ, ಬೆಲ್ಲ, ನಾಟ ಮೊಟ್ಟೆ, ಪಚ್ಚಬಾಳೆಹಣ್ಣು ವಾರಕ್ಕೊಮ್ಮೆ ನಾಟ ಬೆಣ್ಣೆ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ತಲಾ ಎರಡೂವರೆ ಲೀಟರ್ ಹಾಲನ್ನು ಆಹಾರವಾಗಿ ನಿಡಲಾಗುತ್ತಿದೆ ಎಂದು ಸಾಕಾಣಿಕೆದಾರ ಯಡಿಯೂರಪ್ಪ ಹೇಳಿದರು.

ಆರೋಗ್ಯ-ಆಹಾರ ಜಾಗೃತಿಗೆ ಪೋಷಣಾ ಕಾರ್ಡ್

ಬೆಂಗಳೂರು: ವ್ಯಕ್ತಿಯ ಎತ್ತರ, ತೂಕ ಆಳತೆ ಮಾಡಿ, ಅದಕ್ಕೆ ತಕ್ಕಂತೆ 'ಡಯಟ್' ಸಲಹೆ ನೀಡುವ ವಿಶಿಷ್ಟ ಮಳಿಗೆಯೊಂದು ಕೃಷಿ ಮೇಳದ ಆಕರ್ಷಣೆಯ ಕೇಂದ್ರವಿದಿಂದಾಗಿತ್ತು.

ಕೃಷಿ ವಿಶ್ವವಿದ್ಯಾಲಯದ ಅಖಿಲ ಭಾರತ ಸುಸಂಘಟಿತ ಸಂಶೋಧನೆ ಯೋಜನೆ (ಕೃಷಿ ನಿರತ ಮಹಿಳೆಯರು) ಮಳಿಗೆ ಅದು.

ಆಹಾರ ತಜ್ಞೆ ಉಷಾ ರವೀಂದ್ರ ನೇತೃತ್ವದ ವಿಜ್ಞಾನಿಗಳ ತಂಡ, ಮಳಿಗೆಗೆ ಬೇಟಿ ನೀಡುತ್ತಿದ್ದ ಆಸಕ್ತರ ಎತ್ತರ, ತೂಕ ಆಳತೆ ಮಾಡಿ, 'ಆಹಾರ ಪಥ್ಯ'ದ ಬಗ್ಗೆ ಸಲಹೆ ನೀಡುತ್ತಿದ್ದರು.

ತಪಾಸಣೆ ನಂತರ, ವ್ಯಕ್ತಿಯ ವಯಸ್ಸು ಮತ್ತು ದೇಹದಾರ್ಢ್ಯಕ್ಕೆ ತಕ್ಕಂತೆ ಯಾವ ತರಹದ ಆಹಾರವನ್ನು, ಎಷ್ಟು ಪ್ರಮಾಣದಲ್ಲಿ ಸೇವಿಸಬೇಕು ಹಾಗೂ ಜೀವನ ಶೈಲಿ ಹೇಗಿರಬೇಕೆಂಬ ಮಾಹಿತಿಯಿರುವ 'ಪೋಷಣಾ ಕಾರ್ಡ್'ಗಳನ್ನು ನೀಡುತ್ತಿದ್ದರು.

ಆತಿ ತೂಕವಿದ್ದವರಿಗೆ ಕೆಂಪು, ಕಿತ್ತಳೆ ಹಾಗೂ ಹಳದಿ ಬಣ್ಣದ ಕಾರ್ಡ್‌ಗಳು, ಕಡಿಮೆ ತೂಕವಿರುವವರಿಗೆ ಗಾಢ ಹಸಿರು ಬಣ್ಣದ ಕಾರ್ಡ್ ಹಾಗೂ ಸರಿಯಾದ ತೂಕವಿದ್ದವರಿಗೆ ತಿಳಿ ಹಸಿರು ಬಣ್ಣದ ಕಾರ್ಡ್ ನೀಡುತ್ತಿದ್ದರು. ಕಾರ್ಡ್‌ನಲ್ಲಿ ವ್ಯಕ್ತಿಯ ಹೆಸರು, ವಯಸ್ಸು, ತೂಕ, ಎತ್ತರ, ಬಾಡಿ ಮಾಸ್ ಇಂಡೆಕ್ಸ್ (ಬಿಎಂಐ) ನಮೂದಿಸುತ್ತಿದ್ದರು.

'ಡಯಟ್' ಎಂದರೆ ಆಹಾರ ತ್ಯಜಿಸುವುದಲ್ಲ. ಬದಲಿಗೆ ಯಾರು, ಯಾವ ಆಹಾರವನ್ನು ಎಷ್ಟು ಸೇವಿಸಬೇಕೆಂಬುದನ್ನು ತಿಳಿಸಿ, ಆಹಾರ-ಆರೋಗ್ಯದ ಸಂಬಂಧ ಕುರಿತು ಜಾಗೃತಿ ಮೂಡಿಸುವುದು ಈ ಪೋಷಣಾ ಕಾರ್ಡ್‌ನ ಉದ್ದೇಶ' ಎಂದು ವಿಜ್ಞಾನಿ ಉಷಾ ರವೀಂದ್ರ ತಿಳಿಸಿದರು.

ಅಭಿಪ್ರಾಯಗಳು

ಮಾಹಿತಿ ಕಣಜ



ಕೃಷಿಮೇಳ ರೈತರಿಗೆ ಕಲವು ವರ್ಷದಿಂದ ಉತ್ತಮ ಮಾಹಿತಿ ಒದಗಿಸುತ್ತಿದೆ. ಕಳೆದ ವರ್ಷ ಮಳೆಯಿಂದಾಗಿ ಪ್ರಾತ್ಯಕ್ಷಿಕೆ ವೀಕ್ಷಣೆಗೆ ತೊಂದರೆ ಆಗಿತ್ತು. ಕೋಳಿ ಪ್ರಪಂಚ ವಿಭಾಗವು ಕುತೂಹಲ ಮೂಡಿಸಿತ್ತು. ಈ ಬಾರಿ ಮೇಳ ಮಾಹಿತಿ ಕಣಜವಾಗಿದೆ. ಇದರಿಂದ ರೈತರಿಗೆ ಹೆಚ್ಚಿನ ಲಾಭವಾಗಲಿದೆ.

ಮದುಗೌಡ್, ಆಡೂರು

ಸಮಗ್ರ ಮಾಹಿತಿ



ಕೋಲಾರ ಜಿಲ್ಲೆಯಲ್ಲಿ ಅಂತರ್ಜಲ ಮತ್ತು ಕುಸಿತ ಕಂಡಿದ್ದು, ರೈತರು ಸಮಸ್ಯೆ ಎದುರಿಸುತ್ತಿದ್ದಾರೆ. ಬರಗಾಲದ ಸಂದರ್ಭದಲ್ಲಿ ನೀರಿನ ನಿರ್ವಹಣೆ ಹಾಗೂ ಮಳೆ ನೀರು ಸಂಗ್ರಹದ ಬಗ್ಗೆ ಮೇಳ ಮಾಹಿತಿ ಒದಗಿಸುತ್ತಿದೆ.

ರಾಧಾ, ಕೋಲಾರ

ಮಾಹಿತಿ ಬೇಕಿತ್ತು...

ಈರುಳ್ಳಿ ಮೆಕ್ಕೆಜೋಳ ಬೆಳೆಗಳ ಬಗ್ಗೆ ಮತ್ತಷ್ಟು ಮಾಹಿತಿ ಸಿಕ್ಕುವ ಮಳಿಗೆಗಳಷ್ಟು ಜಾಸ್ತಿಯಾಗಬೇಕಿತ್ತು. ಮಾರಾಟಕ್ಕಿಂತ ರೈತರಿಗೆ ಮಾಹಿತಿ ನೀಡುವುದಕ್ಕೆ ಆದ್ಯತೆ ನೀಡಬೇಕಿತ್ತು. ಕೃಷಿಮೇಳ ಮಾರಾಟ ಮೇಳ ಆಗಬಾರದು. ಕೆಲವು ಕಡೆ ಮಾರಾಟವೇ ಪ್ರಧಾನ ಆಗಿದೆ.

ಜೋಷಯ್ಯ, ಹಳ್ಳಿಕೆರೆ



ಪ್ರಾತ್ಯಕ್ಷಿಕೆ ವೀಕ್ಷಿಸಿದ ವಿದ್ಯಾರ್ಥಿಗಳು —ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

1.31 ಲಕ್ಷ ಮಂದಿ ವೀಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ಶುಕ್ರವಾರದಿಂದ ಆರಂಭವಾದ ಕೃಷಿ ಮೇಳಕ್ಕೆ ಮೊದಲ ದಿನ ರೈತರ ಸಂಖ್ಯೆ ಕಡಿಮೆಯಿತ್ತು.

ಕಳೆದ ವರ್ಷ ಹಿಂಗಾರು ಮಳೆಯ ನಡುವೆಯೂ ವಿವಿಧ ಜಿಲ್ಲೆಗಳ ರೈತರು ಮೇಳಕ್ಕೆ ಆಗಮಿಸಿ ಕಣ್ತುಂಬಿಕೊಂಡಿದ್ದರು. ಈ ವರ್ಷ ಬರದ ಛಾಯೆ ಆವರಿಸಿದ್ದರಿಂದ ರೈತರ ಸಂಖ್ಯೆ ಕಡಿಮೆಯಿತ್ತು. ಮೇಳದಲ್ಲಿ ವಿದ್ಯಾರ್ಥಿಗಳು, ನಗರದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಮಳಿಗೆಗಳು ಹಾಗೂ ಪ್ರಾತ್ಯಕ್ಷಿಕೆ ವೀಕ್ಷಿಸಿದರು.

ಶುಕ್ರವಾರ 1.31 ಲಕ್ಷ ಮಂದಿ ಮೇಳ ವೀಕ್ಷಣೆ ಮಾಡಿದ್ದು, 8 ಸಾವಿರ ಮಂದಿ ರೈತರಿಗಾಗಿ ಈ ಆ್ಯಪ್ ಅಭಿವೃದ್ಧಿಸಲಾಗಿದೆ.

ರೈತರು ಯಾವುದೇ ಪ್ರಯೋಗಾಲಯಕ್ಕೆ ಹೋಗದೇ, ಮೊಬೈಲ್ ಆ್ಯಪ್ ಬಳಸಿಕೊಂಡು ತಮ್ಮ ಜಮೀನಿನ ಮಣ್ಣಿನ ಫಲವತ್ತತೆ ತಿಳಿಯಬಹುದಾಗಿದೆ. ಈ ಸಾಫ್ಟ್‌ವೇರ್‌ನಲ್ಲಿ ರೈತರು ಜಮೀನಿನ ಸರ್ವೇ ನಂಬರ್ ನಮೂದಿಸುವ ಮೂಲಕ ಮಣ್ಣಿನ ಪೋಷಕಾಂಶಗಳ ಮಾಹಿತಿ ಜೊತೆಗೆ ರಸಗೊಬ್ಬರಗಳ ಶಿಫಾರಸಿನ ಪ್ರಮಾಣದ ವರದಿಯನ್ನು ಪಡೆಯಬಹುದಾಗಿದೆ. ಪ್ರಯೋಗಾಲಯದಲ್ಲಿ ವಿಶ್ಲೇಷಣೆ ಮಾಡಿದ ವರದಿಗೆ ಹೋಲಿಸಿದರೆ ಈ ವರದಿಯು ಶೇ 75ರಿಂದ 90ರಷ್ಟು ನಿಖರವಾಗಿರುತ್ತದೆ ಎಂದು ಕೃಷಿ ವಿಜ್ಞಾನಿಗಳು ಹೇಳಿದರು.

'ಧರ್ತಿ ಮಿತ್ರ' ಮೊಬೈಲ್ ಆ್ಯಪ್

ಮೇಳದಲ್ಲಿ ಮಣ್ಣಿನ ಫಲವತ್ತತೆ ಮತ್ತು ರಸಗೊಬ್ಬರ ಶಿಫಾರಸ್ಸಿಗೆ 'ಧರ್ತಿ ಮಿತ್ರ' ಹೆಸರಿನ ವೆಬ್ ಹಾಗೂ ಮೊಬೈಲ್ ಆ್ಯಪ್ ಅಭಿವೃದ್ಧಿ ಪಡಿಸಲಾಗಿದ್ದು ಅದನ್ನು ಬಿಡುಗಡೆ ಮಾಡಲಾಯಿತು.

ವಿವಿಯ ಅಖಿಲ ಭಾರತ ಸುಸಂಘಟಿತ ಸಂಶೋಧನಾ ಯೋಜನೆ ಅಡಿ ಈ ಇವುಗಳನ್ನು ಅಭಿವೃದ್ಧಿ ಪಡಿಸಲಾಗಿದೆ.

ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ಹಾಸನ, ರಾಮನಗರ, ಮಂಡ್ಯ ಹಾಗೂ ರಾಮನಗರ ಜಿಲ್ಲೆಯ ರೈತರಿಗೆ ಈ ಆ್ಯಪ್ ಅಭಿವೃದ್ಧಿಸಲಾಗಿದೆ.

ಸಿರಿಧಾನ್ಯದ ಲೋಕ ಅನಾವರಣ

ಮೊದಲ ಬಾರಿಗೆ ಸಿರಿಧಾನ್ಯ ಎಕ್ಸ್‌ಪೊ: ರೈತರ ಆಕರ್ಷಣೆಯ ಕೇಂದ್ರ

• ಆದಿತ್ಯ ಕೆ.ಎ.

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಆಯೋಜಿಸಿರುವ ಕೃಷಿಮೇಳದಲ್ಲಿ ಸಿರಿಧಾನ್ಯಗಳ ಲೋಕವೇ ಅನಾವರಣಗೊಂಡಿದೆ. ಆಹಾರ, ಆರೋಗ್ಯ, ಆದಾಯಕ್ಕೆ ಸಿರಿಧಾನ್ಯಗಳು ಎಂಬ ಪೋಷವಾಕ್ಯದ ಅಡಿ ಈ ಮೇಳ ಆಯೋಜಿಸಲಾಗಿದೆ. ಮೊದಲ ಬಾರಿಗೆ ಸಿರಿಧಾನ್ಯ ಮಳಿಗೆಗಳ ಪ್ರತ್ಯೇಕ ವಿಭಾಗವನ್ನೇ ಸ್ಥಾಪಿಸಲಾಗಿದ್ದು ರೈತರ ಆಕರ್ಷಣೆ ಕೇಂದ್ರವಾಗಿದೆ.

ಸಿರಿಧಾನ್ಯಗಳಲ್ಲಿ ಹಲವು ಬಗೆಯ ಉತ್ಪನ್ನಗಳು ಇಲ್ಲಿ ಅನಾವರಣಗೊಂಡಿವೆ. ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷಾಚರಣೆ ಅಂಗವಾಗಿ ಈ ಮೇಳ ಆಯೋಜಿಸಲಾಗಿದೆ.

ರೈತ ಉತ್ಪಾದಕ ಸಂಸ್ಥೆಗಳು, ಸ್ವಸಹಾಯ ಸಂಘಗಳು ತಯಾರಿಸಿರುವ ಸಿರಿಧಾನ್ಯದ ಪುಡಿ, ಸಿರಿಧಾನ್ಯದ ಬ್ರೆಡ್, ಬಿಸ್ಕತ್ತು ಸೇರಿದಂತೆ ಹಲವು ಬಗೆಯ ತಿನಿಸುಗಳು ಗಮನ ಸೆಳೆಯುತ್ತಿವೆ. ಅಲ್ಲದೇ ಸಿರಿಧಾನ್ಯದ ಮಹತ್ವವನ್ನೂ ಸಾರುತ್ತಿದೆ ಈ ಮೇಳ. ಸದ್ಯ 20ಕ್ಕೂ ಹೆಚ್ಚು ಮಳಿಗೆಗಳಲ್ಲಿ ಸಿರಿಧಾನ್ಯದ ಉತ್ಪನ್ನಗಳಿದ್ದು ಶನಿವಾರ ಅವುಗಳ ಸಂಖ್ಯೆ ಹೆಚ್ಚಲಿವೆ.

ಅಖಿಲ ಭಾರತ ಸುಸಂಘಟಿತ ಸಿರಿಧಾನ್ಯ ಮಳಿಗೆಯಲ್ಲಿ ಸಿರಿಧಾನ್ಯದ ವೈಭವವೇ ಇದೆ. ಸಾಂಪ್ರದಾಯಿಕ ಸಿರಿಧಾನ್ಯ ಶೇಖರಣೆ, ಒಳಕಲ್ಲು, ಸಂಸ್ಕರಣಾ ಪದ್ಧತಿ, ಮೊರದಿಂದ ಸಿರಿಧಾನ್ಯ ಸ್ವಚ್ಛತೆ, ಬೀಸುವ ಕಲ್ಲು, ಹಿಟ್ಟಿನಿಂದ ರೊಟ್ಟಿ ತಯಾರಿಕೆ ಪ್ರಾತ್ಯಕ್ಷಿಕೆ ನೀಡಲಾಗುತ್ತಿದೆ. ಇದು ರೈತರನ್ನು ಆಕರ್ಷಿಸುತ್ತಿದೆ.



ಸಿರಿಧಾನ್ಯಗಳ ಮಳಿಗೆಯಲ್ಲಿ ಸಂಸ್ಥರಣೆಯ ವಿವಿಧ ಹಂತಗಳ ಬಗ್ಗೆ ಪ್ರಾತ್ಯಕ್ಷಿಕೆ ನೀಡಲಾಗುತ್ತಿದೆ —ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

'ಬಳಕೆ ಹೆಚ್ಚು: ಉತ್ಪಾದನೆ ಕಡಿಮೆ'



ಸುಜಯ್

ಸಿರಿಧಾನ್ಯಕ್ಕೆ ಈಗ ಬೇಡಿಕೆ ಹೆಚ್ಚಾಗಿದ್ದು ಪೂರೈಕೆ ಕಡಿಮೆಯಿದೆ. ನಾವು ಸಿರಿಧಾನ್ಯ ಮೌಲ್ಯವರ್ಧನೆ ಮಾಡಿ ಮಾರಾಟ ಮಾಡುತ್ತಿದ್ದು ಸ್ವಸಹಾಯ ಸಂಘಗಳಿಗೆ ತರಬೇತಿ ಸಹ ನೀಡುತ್ತಿದ್ದೇವೆ. ಕಳೆದ ಕೆಲವು ತಿಂಗಳಿಂದ ಸಿರಿಧಾನ್ಯದ ಪಾಸ್ತ, ಬ್ರೆಡ್, ಬಿಸ್ಕತ್ತಿಗೆ ಬೇಡಿಕೆ ಹೆಚ್ಚಾಗಿದೆ ಎಂದು ಕನಕಪುರ ಆರ್ಗ್ಯಾನಿಕ್ ಪ್ರೊಡ್ಯೂಸರ್ ಕಂಪನಿಯ ಸುಜಯ್ ರಾಮಸಾಗರ ಹೇಳಿದರು.

ಸಿರಿಧಾನ್ಯದಿಂದ ಅವಲಕ್ಕಿ ತಯಾರಿಸಲಾಗುತ್ತಿದೆ. ರೈತ ಉತ್ಪಾದಕ ಸಂಸ್ಥೆಯಿಂದ ಸಿರಿಧಾನ್ಯ ಬೆಳೆಯಲು ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದು ನಾವೇ ಧಾನ್ಯ ಖರೀದಿಸಿ ಮೌಲ್ಯವರ್ಧನೆ ಮಾಡುತ್ತಿದ್ದೇವೆ. ಇದರಿಂದ ರೈತರಿಗೂ ಲಾಭವಾಗುತ್ತಿದೆ ಎಂದು ಅವರು ಹೇಳಿದರು.

ರೋಗಬಾಧೆ:

ಸಿರಿಧಾನ್ಯಕ್ಕೂ ಹಲವು ರೋಗಗಳು ಬಾಧಿಸುತ್ತಿದ್ದು ಅವುಗಳ ನಿರ್ವಹಣೆ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. ಕುತ್ತಿಗೆ ರೋಗ, ಬೆಂಕಿರೋಗ, ಇಲಿಕುಬೆ

Focus on new farm technologies, Siddaramaiah tells scientists

Launches four-day Krishi Mela - 2023; Calls green revolution continuous process

EXPRESS NEWS SERVICE
@ Bengaluru

CHIEF Minister Siddaramaiah on Friday said the green revolution should be a continuous process. Constant innovation of technologies for farming, research on new crop varieties, increasing soil fertility and providing remunerative prices for farmers' produce should be assured.

He was speaking after inaugurating the four-day Krishi Mela - 2023 on the campus of Gandhi Krishi Vigyana Kendra (GKVK) in the city.

He said the University of Agricultural Sciences (UAS) should not just produce graduates but also focus on promoting new technologies. It should work towards making farmers aware of how farming can be profitable and also aim at investing more in research projects.

"Our state has the largest dryland in the entire country, except Rajasthan. Most of our farmers depend on agriculture for their livelihood. If we want our farmers to continue agriculture, the sector has to be made profitable," Siddaramaiah said.

Many farmers are selling their land now because of losses due to extreme weather conditions and high input costs. "Scientists should focus on new technologies to help farmers earn more profits," the CM said.

Siddaramaiah stressed the need for new drought-resistant crop varieties to help farmers in the wake of climate change. He assured the state government's support for this.

"Even if the government gives subsidies and insurance, they will not help farmers overcome crop loss. The loss has been estimated at Rs 33,000 crore this year. As per the National Disaster Response Force (NDRF) guidelines, the government has approached the Centre for a compensation of Rs 17,900 crore. Still, the state has to meet Rs 16,000-crore loss," the chief minister said.



Chief Minister Siddaramaiah waves at people at the launch of Krish Mela-2023 in Bengaluru on Friday | NAGARAJA GADEKAL

It is the responsibility of agricultural universities and the government to guide farmers, he added. Deputy Chief Minister DK Shivakumar said the government has appealed to the Centre to increase MGNREGA mandays from 100 to 150, considering the drought in Karnataka.

He said 200 taluks are reeling under drought and an increase in mandays will help people of the affected areas. "There is a rule that MGNREGA mandays should be increased during drought. But nothing has been done yet. Those who claim to be farmers and sons of soil in the BJP must urge the Centre to increase the number of mandays," he added.

"Farmers from Bengaluru Rural, Kanakapura, Chikkaballapura and Kolar are role models for the country as they have achieved success in growing vegetables, fruits and flowers. They are making use of scarce resources available to them and are earning good returns," he said. Siddaramaiah, Shivakumar and Agriculture Minister N Chaluvarayaswamy honoured five 'Best Farmers' and one agricultural scientist for their achievements.

Day one of the mela saw over 1,31,000 participants and a turnover of Rs 80 lakh from 625 stalls.



Visitors look at bullocks and goats on display at the Krishi Mela-2023 in Bengaluru on Friday | NAGARAJA GADEKAL

THINGS TO LOOK OUT FOR

BENGALURU LONG-EARED GOATS

One of the unique animals on display at Krishi Mela is the Bengaluru long-eared goat, which is priced between Rs 30,000 and Rs 3 lakh. The three goats on display are coloured white, brown and a mix of the two, and have 19-22 inch-long ears.

APP FOR SOIL HEALTH

The University of Agricultural Sciences on Friday launched the Dhartimitra app for soil health cards and fertiliser recommendations that will keep farmers from overusing chemicals on their crops and help mitigate emission of greenhouse gases. The app was launched for 10 districts namely Tumakuru, Chitradurga, Mysuru, Hassan, Chamarajanagar, Mandya, Ramanagara, Bengaluru Rural, Chikkaballapura and Kolar. The software will provide a soil health card, including fertiliser recommendations based on the SIC approach and through the soil fertility rating – Low-Medium-High (LMH) approach by fetching the geocoordinates of the location or survey number of a farmer's plot of land.

New sunflower to help reduce flower waste

PURAN CHOUDHARY @ Bengaluru

WHILE the original sunflowers are magnanimous in size, when compared to any other flower, the University of Agricultural Sciences (UAS), through cross-pollination and multiple experiments, has created a new variety of sunflower called 'Dwarf Ornamental Sunflowers'. Just as the name suggests, this variety can be used for decorations, coronations, and bouquets at different events, ceremonies and weddings.

These sunflowers have a shelf life of 7-10 days, which is a bonus compared to smaller flowers, and yield within 45-55 days. Using ornamental sunflowers can also reduce waste from flowers, as they are large and decorators can use a small number of them to get their work done.

Speaking to *TNIE*, Dr MS Uma, Associate Director of Research, said, "Currently, some of the subcategories are under observation and we are trying stabilisation so that they can yield better. Some of them are segregating and yielding different colours such as purple, which we are working on."

She added that these flowers can be a great substitute for those that are easily perishable and are small in size, and it will also be beneficial for farmers who can earn good money cultivating them. Six kg of seeds can yield 1,10,000 sunflowers over 1 hectare of land, within a short period of time. The soil fertility to grow them is also flexible – red or mixed soil can be used and their growth is low-maintenance. These flowers will be priced at Rs 10-15 in urban areas.

The sunflowers can be grown in all seasons, except peak summer, Dr Uma added. The new variety is on display at Krishi Mela-2023. Scientists plan to handhold farmers in growing these sunflowers using various technologies.



Students from various schools line up to see farm produce and flowers displayed at the Krishi Mela which began on the GKVK campus in Bengaluru on Friday.
DH PHOTO/PUSHKAR V

1.31 lakh people visit Krishi Mela on Day One

UDBHAVI BALAKRISHNA
BENGALURU, DHNS

A solar-powered nipping machine and a modified nozzle for controlled weedicide sprays are only two of the many technological innovations on display at the Krishi Mela this year.

Nearly 1.31 lakh people visited on the first day of the mela being held on the GKVK campus in Yelahanka to explore the 625 stalls, besides the vast rows of ornamental sunflowers, cherry tomatoes and exotic vegetables on display.

The nipping machine, designed by a 'krushi pandit', named Sharanbasappa P Patil from Kalaburagi, can help a farm labourer nip the branches of growing crops spread over an acre in a few hours, compared to what four to five labourers would do in a day.

Students from various schools and colleges lined up in neat rows to explore each stall set up by various universities, cooperative societies, small and medium-sized businesses, and large companies.

The University of Agricultural Sciences has displayed various locally-developed technological innovations and drought-resistant crop varieties, besides popularising millet-based products.

At the inaugural event, five progressive farmers and a researcher from across the state were awarded for their farming experiments and contributions to growing agriculture and horticulture yield in their areas.

The university also launched the Dhartimitra application, developed by soil scientists, to help farmers test the soil health and conditions optimal for sowing seeds.

Besides this, the university released five new crop varieties, including one each of a hybrid sunflower, ragi, little millet, proso millet, and jackfruit. A total of 32 technological innovations, including two agricultural engineering tools, 15 crop production and 15 crop protection methods, were also released on Friday.

18-11-2023
Dec Hrd- Pg 04

18-11-2023
Ind Exp - Pg 04

'ಬಿಳಿ ನೊಣ' ನಿಯಂತ್ರಣಕ್ಕೆ ಬೇವಿನ ಎಣ್ಣೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ಲೀಟರ್ ನೀರಿಗೆ 5 ಮಿ.ಲೀ ಬೇವಿನೆಣ್ಣೆ, 1 ಮಿಲೀ ಸೋಪ್ ಆಯಿಲ್ ಬೆರೆಸಿ, ಹದಿನೈದು ದಿನಕ್ಕೊಮ್ಮೆ ಬಿಳಿ ನೊಣ ಬಾಧಿತ ತೆಂಗಿನ ಗರಿಗಳ ಕೆಳಭಾಗಕ್ಕೆ ಸಿಂಪಡಿಸಿದರೆ, ನೊಣಗಳ ಬಾಧೆ ಕ್ರಮೇಣ ಕಡಿಮೆಯಾಗುತ್ತದೆ...

ನಗರದ ಕೃಷಿ ವಿಶ್ವವಿದ್ಯಾಲಯದಲ್ಲಿ ಶುಕ್ರವಾರದಿಂದ ಆರಂಭವಾದ ಕೃಷಿಮೇಳದಲ್ಲಿ ಕೀಟಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರಕಾಶ್, ಅವರು ಮಳಿಗೆಗೆ ಭೇಟಿ ನೀಡಿದ ರೈತರಿಗೆ ತೆಂಗು ಮತ್ತಿತರ ಬೆಳೆಗಳಿಗೆ ತಗಲುವ ಬಿಳಿನೊಣ ಬಾಧೆ ಹಾಗೂ ಅದನ್ನು ನಿವಾರಿಸುವ ವಿಧಾನವನ್ನು ವಿವರಿಸಿದರು.

ಪ್ರದರ್ಶನಕ್ಕಿಟ್ಟಿದ್ದ ಬಿಳಿ ನೊಣ ಬಾಧಿತ ತೆಂಗಿನ ಗರಿಗಳನ್ನು ರೈತರಿಗೆ ತೋರಿಸಿ ವಿವರಣೆ ನೀಡಿದ ಪ್ರಕಾಶ್ ಅವರು, 'ಇದು ತೆಂಗಿಗಷ್ಟೇ ಅಲ್ಲದೇ, ಅದರೊಂದಿಗೆ ಬೆಳೆಯುವ ಅಡಿಕೆ, ಬಾಳೆಯಂತಹ ಬೆಳೆಗಳನ್ನು ಬಾಧಿಸುತ್ತದೆ. ಈ ನೊಣಗಳು ಎಲೆಗಳಲ್ಲಿರುವ ರಸ ಹೀರುತ್ತವೆ. ಇದರಿಂದ ಗಿಡಗಳು ಸೊರಗುತ್ತವೆ. ಕೀಟಬಾಧೆ ಪತ್ತೆಯಾದ ಆರಂಭದಲ್ಲೇ ಬೇವಿನೆಣ್ಣೆ–ಸೋಪ್ ಆಯಿಲ್ ಮಿಶ್ರಣ, ಸಿಂಪಡಿಸಿದರೆ ಬಾಧೆಯನ್ನು ಹತೋಟಿಗೆ ತರಬಹುದು' ಎಂದು ಸಲಹೆ ನೀಡಿದರು.

'ಈ ಮಿಶ್ರಣವನ್ನು ಸಿಂಪಡಿಸುತ್ತಿದ್ದರೆ, ಬಿಳಿ ನೊಣದ ಬಾಧೆ ನಿವಾರಣೆಯಾಗುವ ಜೊತೆಗೆ, ಈ ನೊಣವನ್ನು ತಿನ್ನುವ ಸ್ವಾಭಾವಿಕ ಕೀಟಗಳು ಅಭಿವೃದ್ಧಿಯಾಗುತ್ತವೆ. ಮಿಶ್ರಣ ಸಿಂಪಡಿಸುವವರು ಕಡ್ಡಾಯವಾಗಿ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಬೇಕು' ಎಂದು ಸಲಹೆ ನೀಡಿದರು.

'ಬಿಳಿ ನೊಣ ಗಾಳಿಯಿಂದ ಹರಡುತ್ತದೆ. ಹಾಗಾಗಿ, ಈ ಮಿಶ್ರಣ ಸಿಂಪಡಿಸುವ ವಿಧಾನವನ್ನು ಸಾಮೂಹಿಕವಾಗಿ ಅನುಸರಿಸುವುದು ಒಳ್ಳೆಯದು ಎಂದು ರೈತರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

18-11-2023
Prajavani Pg 5B

ಮೊದಲ ದಿನವೇ 1.31 ಲಕ್ಷ ಮಂದಿ ಭೇಟಿ । ಗ್ಯಾರಂಟಿಗಳ ಸ್ತಬ್ಧ ಚಿತ್ರ ಪ್ರದರ್ಶನ

ಕೃಷಿ ಮೇಳದಲ್ಲಿ ಸಿರಿಧಾನ್ಯ ಧ್ಯಾನ

■ ವಿಕ ಸುದ್ದಿಲೋಕ ಬೆಂಗಳೂರು

ಬೆಂಗಳೂರು ಕೃಷಿ ವಿವಿಯ ಜಿಕೆವಿಕೆ ಆವರಣದಲ್ಲಿ ಆರಂಭವಾದ **ಕೃಷಿ ಮೇಳ**ದ ಮೊದಲ ದಿನವೇ ಮೊಟ್ಟೆ ಫ್ಲೇಕ್ಸ್, ಅಂಗೂರ ಹಾಗೂ ಸಿರಿಧಾನ್ಯಗಳ ಪ್ರದರ್ಶನಗಳು ರೈತರ ಜೀವನದ ಶ್ರಮಕ್ಕೆ ಸಾಕ್ಷಿಯಾಗಿ ಜನರ ಕಣ್ಣನ್ನು ಸೆಳೆದವು.

ಮೊದಲ ದಿನವಾದ ಶುಕ್ರವಾರ ರಾಜ್ಯದ ನಾನಾ ಭಾಗಗಳಿಂದ 1.31 ಲಕ್ಷ ಮಂದಿ ಭೇಟಿ ನೀಡಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂರ್ಯಕಾಂತಿ ಹೂವು, ರಾಗಿ ಬೆಳೆ ಕಂಡು ಸಂಭ್ರಮಪಟ್ಟರು. ಕುಲಪತಿ ಡಾ. ಎಸ್.ವಿ. ಸುರೇಶ್ ಮೇಳದ ಮಾಹಿತಿ ನೀಡಿದರು.

ಕೃಷಿ ಮೇಳದಲ್ಲಿ ಒಂದೆಡೆ ಜಾನುವಾರುಗಳು, ಮತ್ತೊಂದೆಡೆ ಸೂರ್ಯಕಾಂತಿ ಸೀರೆಯಂತೆ ನಾನಾ ಬೆಳೆಗಳ ವೀಕ್ಷಣೆ, ನರ್ಸರಿಗಳಲ್ಲಿ ನಾನಾ ತರಹದ ಹಣ್ಣು, ಅಲಂಕಾರಿಕ ಸಸಿಗಳು, ಹೂವಿನ ಗಿಡಗಳನ್ನು ಖರೀದಿಯಿಂದ ಖರೀದಿಸಿದರು.

ಗ್ಯಾರಂಟಿಗಳ ಸ್ತಬ್ಧ ಚಿತ್ರಗಳ ಆಕರ್ಷಣೆ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಯೋಗದಿಂದಿಗೆ ಸರಕಾರದ ಗ್ಯಾರಂಟಿ ಯೋಜನೆಗಳ ಬಗ್ಗೆ ಬೆಳಕು ಚೆಲ್ಲುವ ಸ್ತಬ್ಧ ಚಿತ್ರಗಳ ಬೃಹತ್ ಪ್ರದರ್ಶನ ಆಯೋಜಿಸಲಾಗಿತ್ತು. ಪೈರು ನಾಟಿ ಮಾಡುವುದು, ಎತ್ತಿನ ಗಾಡಿಯಲ್ಲಿ ದಿನಸಿ ಮೂಟೆಗಳನ್ನು ಹೊತ್ತು ಹೊರಡುವ ದೃಶ್ಯ, ಪಡಿತರ ವಿತರಣೆ ವ್ಯವಸ್ಥೆಗಳ ಸ್ತಬ್ಧ ಚಿತ್ರಗಳು ನೋಡುಗರ ಗಮನ ಸೆಳೆಯುತ್ತಿದ್ದವು.



ಕೃಷಿ ಮೇಳ ರೈತರಿಗೆ ಒಂದು ಮಾಹಿತಿ ಪೂರಕ ಪ್ರದರ್ಶನವಾಗಿದೆ. ನಾನಾ ಬ್ಯಾಂಕ್‌ಗಳು ರೈತರಿಗೆ ಕೃಷಿ ಉಪಕರಣಗಳನ್ನು ಖರೀದಿಸಲು ಹಾಗೂ ಕೃಷಿಗೆ ಪೂರಕವಾದ ಸಾಲ ಸೌಲಭ್ಯಗಳನ್ನು ನೀಡುತ್ತವೆ. ಈ ಸಂಬಂಧ ರೈತರು ಒಂದೇ ವೇದಿಕೆಯಲ್ಲಿ ಸಮಗ್ರ ಮಾಹಿತಿ ಪಡೆಯಲು ಕೃಷಿ ಮೇಳವು ರೈತರು ಮತ್ತು ಬ್ಯಾಂಕ್‌ಗಳಿಗೆ ಒಂದು ಸೇತುವೆಯಾಗಿದೆ.

-ನಿರಂಜನ ಕುಮಾರ್ ಅಸಿಸ್ಟೆಂಟ್ ಮ್ಯಾನೇಜರ್ ಬ್ಯಾಂಕ್ ಆಫ್ ಬರೋಡ

ರಿಯಾಯಿತಿ ದರದಲ್ಲಿ ಮುದ್ದೆ ಊಟ: ಮೇಳದಲ್ಲಿ ರಿಯಾಯಿತಿ ದರದಲ್ಲಿ ವ್ಯವಸ್ಥೆಮಾಡಿದ್ದ ಬಿಸಿ ರಾಗಿ ಮುದ್ದೆ, ಅವರೆಕಾಳಿನ ಸಾರು, ಆನ್ ರಸಂ, ಮೊಸರನ್ನದ ಜತೆಗೆ ಬೇಯಿಸಿದ ಕೋಳಿ ಮೊಟ್ಟೆ, ಮೈಸೂರು ಪಾಕ್‌ನೊಂದಿಗೆ ಊಟ ಸವಿದರು. 8 ಸಾವಿರ ಮಂದಿ ರಿಯಾಯಿತಿ ದರದ ಊಟಕ್ಕೆ ಕೂಪನ್ ಪಡೆದಿದ್ದಾರೆ. ಒಟ್ಟಾರೆ 80 ಲಕ್ಷ ರೂ. ವಹಿವಾಟು ನಡೆದಿದೆ ಎಂದು ಜಿಕೆವಿಕೆ ಪ್ರಾಧ್ಯಾಪಕರಾದ ಡಾ. ಕೆ. ಶಿವರಾಮು ತಿಳಿಸಿದರು.

ಮೊದಲ ಬಾರಿಗೆ ಬೀಜ ಸಂತೆ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ರಾಷ್ಟ್ರೀಯ ಬೀಜ ಪ್ರಾಯೋಜನೆ, ರಾಷ್ಟ್ರೀಯ ಬೀಜ ನಿಗಮ ಮತ್ತಿತರ ಸಂಸ್ಥೆಗಳ ಸಹಯೋಗದಲ್ಲಿ ಬೀಜ ಸಂತೆಯನ್ನು ಏರ್ಪಡಿಸಲಾಗಿದೆ. ರಾಗಿ ತಳಗಳು, ಹುರುಳಿ, ಅಲಸಂದೆ, ಸಿರಿಧಾನ್ಯಗಳು ಮತ್ತಿತರ ಬತ್ತನೆ ಬೀಜಗಳ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. ರೈತರು ಹಿಂಗಾರಿಗೆ ಬೇಕಾದ ಬತ್ತನೆ ಬೀಜಗಳನ್ನು ಮೇಳದಲ್ಲಿ ಖರೀದಿಸಬಹುದು. ಹೆಚ್ಚು ಬತ್ತನೆ ಬೀಜ ಬೇಕಿದ್ದರೆ, ಸ್ಥಳದಲ್ಲಿಯೇ ಬುಕ್ ಮಾಡಬಹುದು.

ಕಿಚನ್ ಗಾರ್ಡನ್ ಕಿಟ್: ಕಿಚನ್ ಗಾರ್ಡನ್ ಮಾಡುವವರಿಗಾಗಿ ಹೂವು, ತರಕಾರಿ ಹಾಗೂ ಸೊಪ್ಪಿನ ಬೀಜಗಳನ್ನು ಒಳಗೊಂಡ ಕಿಟ್‌ನ ಮಾರಾಟ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ, ಸಣ್ಣ ಪ್ರಮಾಣದಲ್ಲಿ ಮನೆ ಬಳಕೆಗೆ ಸೊಪ್ಪು-ತರಕಾರಿ ಬೆಳೆಯಬೇಕಿದ್ದರೆ ಅಥವಾ ರೈತರು ಎಕರೆಗಟ್ಟಲೆ ಬತ್ತನೆ ಬೀಜ ಬೇಕಿದ್ದರೆ ಬೀಜ ಸಂತೆಯಲ್ಲಿ ಸಂಪರ್ಕಿಸಬಹುದು ಎಂದು ಬೆಂಗಳೂರು ಕೃಷಿ ವಿವಿಯ ಸತೀಶ್ ಬಾಬು ಮಾಹಿತಿ ನೀಡಿದರು.

ಸಿರಿಧಾನ್ಯ ಖಾದ್ಯಗಳ ಕಾರುಬಾರು: ಕೃಷಿ ಮೇಳದ ಒಳ, ಹೊರಗಿನ ಮಳಿಗೆಗಳಲ್ಲಿ ಎಲ್ಲೆಲ್ಲೂ ಸಿರಿಧಾನ್ಯಗಳದ್ದೇ ಮಾತು. ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನ ತಿನಿಸುಗಳದ್ದೇ ಕಾರುಬಾರು. ಸಿರಿಧಾನ್ಯಗಳ ತಿನಿಸು, ಬೇಕರಿ ಉತ್ಪನ್ನ, ಚಿಪ್ಸ್, ಕಷಾಯದ ಪುಡಿ, ರಾಗಿ ಕಪ್‌ಕೇಕ್, ರಾಗಿ ಕುಕ್ಕೀಸ್, ನಚ್ಚೆ ಕುಕ್ಕೀಸ್, ಸಾವೆ ಚಕ್ಕಿಪೀಗ ಸಿರಿಧಾನ್ಯಗಳ ಬಗೆಗಿನ ಖಾದ್ಯಗಳು ಜನರನ್ನು ಆಕರ್ಷಿಸುತ್ತಿವೆ.

ಮಣ್ಣಿನ ಪರೀಕ್ಷೆಗೆ ಮೊಬೈಲ್ ಆ್ಯಪ್: ಕೃಷಿ ವಿವಿ ಅಭಿವೃದ್ಧಿಪಡಿಸಿದ ಮಣ್ಣಿನ ಫಲವತ್ತತೆ ಮತ್ತು ರಸಗೊಬ್ಬರಗಳ ಶಿಫಾರಸಿಗಾಗಿ 'ಧರ್ತಿಮಿತ್ರ' ಹೆಸರಿನ ಮೊಬೈಲ್ ಆಪ್ ಅನ್ನು ಲೋಕಾರ್ಪಣೆಗೊಳಿಸಲಾಯಿತು.



ಬೆಂಗಳೂರಿನ ಕೃಷಿಮೇಳದಲ್ಲಿ ಕೃಷಿ ಸಾಧಕರನ್ನು ಸಿಎಂ ಸಿದ್ದರಾಮಯ್ಯ ಸನ್ಮಾನಿಸಿದರು.

ಬರಗಾಲದಿಂದ ರೈತರಿಗೆ 16 ಸಾವಿರ ಕೋಟಿ ರೂ. ನಷ್ಟ

■ ವಿಕ ಸುದ್ದಿಲೋಕ ಬೆಂಗಳೂರು

''ರಾಜ್ಯದಲ್ಲಿ ಬರಗಾಲ ಉಂಟಾಗಿದ್ದು, ಬೆಳೆ ವಿಮೆ ಪಾವತಿಸಿದ್ದರೂ ರೈತರಿಗೆ ಪೂರ್ಣ ಪ್ರಮಾಣದಲ್ಲಿ ಬೆಳೆ ನಷ್ಟ ಪರಿಹಾರ ಸಿಗುತ್ತಿಲ್ಲ,'' ಎಂದೂ ಮುಖ್ಯಮಂತ್ರಿ ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದರು.

ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಗುರುವಾರ ಆರಂಭವಾದ ಕೃಷಿ ಮೇಳದಲ್ಲಿ ಕೃಷಿಯಲ್ಲಿ ಸಾಧನೆಗೈದ ರೈತರಿಗೆ ಕೃಷಿ ಪ್ರಶಸ್ತಿಗಳನ್ನು ಪ್ರದಾನ ಮಾಡಿ''ಬರಗಾಲದಿಂದ ರಾಜ್ಯದಲ್ಲಿ ಸುಮಾರು 33 ಸಾವಿರ ಕೋಟಿ ರೂ.ಗಳಷ್ಟು ನಷ್ಟವಾಗಿದೆ. ಎನ್‌ಡಿಆರ್ ಎಫ್ ಮಾರ್ಗಸೂಚಿಯಂತೆ 17,000 ಕೋಟಿ ಪರಿಹಾರ ಕೊಟ್ಟರೂ, ರೈತರಿಗೆ 16 ಸಾವಿರ ಕೋಟಿಯಷ್ಟು ನಷ್ಟವಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ರೈತರನ್ನು ಕಾಪಾಡುವುದು ಸರಕಾರದ ಹಾಗೂ ವಿವಿಗಳ ಜವಾಬ್ದಾರಿ. ಆಹಾರದ ಉತ್ಪಾದನೆಯಾಗಬೇಕಾದರೆ ರೈತರನ್ನು ಉಳಿಸುವ ಕೆಲಸ ಮಾಡಬೇಕಿದೆ,'' ಎಂದರು.

''ಕೃಷಿ ವಿಶ್ವವಿದ್ಯಾಲಯ ಕೇವಲ ಕೃಷಿ ಪದವೀಧರರನ್ನು ತಯಾರಿಸುವ ಸಂಸ್ಥೆಯಲ್ಲ ಹಾಗಾಗಿ, ಕೃಷಿ ವಿಜ್ಞಾನಿಗಳು, ಪ್ರಾಧ್ಯಾಪಕರು ಕೃಷಿ ಸಂಶೋಧನೆಗೆ ಹೆಚ್ಚಿನ ಒತ್ತು ನೀಡಬೇಕು. ಕಡಿಮೆ ನೀರಿನಲ್ಲಿಯೂ ಬೆಳೆಯಲು ಸಾಧ್ಯವಿರುವ ತಳಗಳನ್ನು ಸಂಶೋಧಿಸಬೇಕಿದೆ. ಇದಕ್ಕೆ ಹೆಚ್ಚಿನ ಹಣ ನೀಡಲು ಸರಕಾರ ಸಿದ್ಧವಿದೆ. ಈಗಾಗಲೇ ಕೃಷಿ ಭಾಗ್ಯ ಯೋಜನೆ ಪುನಃ ಜಾರಿ ಮಾಡಲಾಗಿದೆ,'' ಎಂದು ಹೇಳಿದರು.

''ಹೊರು ಕ್ರಾಂತಿ ನಿರಂತರವಾಗಬೇಕು. ಹೊಸ ತಳಗಳು, ಹೊಸ ಔಷಧ, ಮಣ್ಣಿನ ಫಲವತ್ತತೆ, ತಂತ್ರಜ್ಞಾನ, ರೈತರಿಗೆ ನ್ಯಾಯಯುತ ಬೆಲೆ, ಆಹಾರ ಸಂಗ್ರಹಣೆಗೆ ಗೋದಾಮುಗಳು ಸಿಕ್ಕಾಗ ಮಾತ್ರ ಸುಸ್ಥಿರ ಕೃಷಿ ಬೆಳವಣಿಗೆಯಾಗುತ್ತದೆ,'' ಎಂದರು.

ಜಮೀನು ಮಾರಬೇಡಿ : ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ''ಬರಗಾಲದ ಕಾರಣ ನರೇಗಾ ಕೂಲಿ ದಿನಗಳನ್ನು 100ರಿಂದ 150ಕ್ಕೆ ಹೆಚ್ಚಿಸಲು ಕೇಂದ್ರಕ್ಕೆ ಮನವಿ ಸಲ್ಲಿಸಲಾಗಿದೆ,'' ಎಂದರು.

''ಕೊರೋನಾ ಸಮಯದಲ್ಲಿ ನಗರಗಳಿಂದ ಹಳ್ಳಿಗಳಿಗೆ ಬಂದಿರುವ ಜನರು ಜಮೀನು ಖರೀದಿಸಿ ಫಾರ್ಮ್‌ಹೌಸ್ ಕಟ್ಟಿಕೊಳ್ಳುತ್ತಿರುವವರು ದಡ್ಡರೇ? ಜಮೀನು ನಮ್ಮ ಬದುಕಿಗೆ ಯಾವಾಗಲೂ ಆಧಾರ. ರೈತರು ಏನೇ ಒತ್ತಡ ಬಂದರೂ ತಮ್ಮ ಜಮೀನು ಮಾರಾಟ ಮಾಡಿಕೊಳ್ಳಲು ಹೋಗಬೇಡಿ,'' ಎಂದು ಹೇಳಿದರು.

''ರಾಜ್ಯದಲ್ಲಿ ಬೆಳೆದ ಹೂವು, ಹಣ್ಣು ತರಕಾರಿಗಳು ಹೊರದೇಶಗಳಿಗೆ ರಫ್ತಾಗುತ್ತಿರುವುದು ಹೆಮ್ಮೆಯ ಸಂಗತಿ. ಒಕ್ಕಲುತನಕ್ಕೆ ಯಾವುದೇ ಜಾತಿ, ಧರ್ಮವಿಲ್ಲ, ಭೂಮಿಯನ್ನು ಕಾಪಾಡಿಕೊಂಡು ಹಸಿದವನಿಗೆ ಅನ್ನ ಹಾಕುತ್ತಿರುವ ರೈತರು ದೇಶಕ್ಕೆ ದೊಡ್ಡ ಸೇವೆ ಸಲ್ಲಿಸುತ್ತಿದ್ದಾರೆ. ಜೈ ಜವಾನ್ ಜೈ ಕಿಸಾನ್ ಮಾತಿನಂತೆ ಈ ಭೂಮಿ ಕಾಪಾಡಿಕೊಂಡು ಬರುತ್ತಿರುವುದೇ ಕೃಷಿಕ ಸಮುದಾಯ,'' ಎಂದು ಹೇಳಿದರು.

ಮೊಟ್ಟೆ ಫ್ಲೇಕ್ಸ್ ಮೊಟ್ಟೆಯನ್ನು ಇಡಿಯಾಗಿ ತಿನ್ನಲು ಕೆಲವರು ಮುಜುಗರ ಮಾಡುತ್ತಾರೆ. ಕೆಲವರಿಗೆ ಅದರ ವಾಸನೆ ಆಗುವುದಿಲ್ಲ. ಇನ್ನು ಕೆಲವರು ಹಳದಿ ಭಾಗವನ್ನು ಪಕ್ಕಕ್ಕಿಡುತ್ತಾರೆ. ಇಂಥವರಿಗೆ ಬಂದಿವೆ ಮೊಟ್ಟೆಯ ಫ್ಲೇಕ್ಸ್. ಮೊಟ್ಟೆಯ ಹಳದಿ ಭಾಗದಿಂದ ಕಾರ್ನ್ ಫ್ಲೇಕ್ಸ್‌ನಂತೆ ಮೊಟ್ಟೆಫ್ಲೇಕ್ಸ್ ತಯಾರಿಸಲಾಗಿದೆ. ತಂಜಾವೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫುಡ್ ಟೆಕ್ನಾಲಜಿಯ ಎಂಟರ್‌ಪ್ರಿನರ್‌ಶಿಪ್ ಆ್ಯಂಡ್ ಮ್ಯಾನೇಜ್‌ಮೆಂಟ್ ಮೊಟ್ಟೆಫ್ಲೇಕ್ಸ್‌ಗಳನ್ನು ಸಂಸ್ಥೆಯ ತಯಾರಿಸಿದೆ. ಇದು ವಾಸನೆಯಿರು ವುದಿಲ್ಲ. ಹಾಲಿನಲ್ಲಿ ಮಿಶ್ರಣ ಮಾಡಿಕೊಂಡು ಸೇವಿಸಬಹುದು ಎಂದು ಸಂಸ್ಥೆಯ ಪ್ರಾಧ್ಯಾಪಕ ಸುನಿಲ್ ತಿಳಿಸಿದರು.

18-11-2023
V-karanataka- Pg 06



ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ವತಿಯಿಂದ ಆಯೋಜಿಸಿರುವ ಕೃಷಿ ಮೇಳ 2023ಕ್ಕೆ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಿದರು. ಡಿಸಿಎಂ ಡಿ.ಕೆ.ಶಿವಕುಮಾರ್, ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಶಾಸಕ ಶರತ್ ಬಚ್ಚೇಗೌಡ, ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ್ ಮತ್ತಿತರ ಗಣ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

18-11-2023
E sanje- Pg 01

18-11-2023
Sanjevani- Pg 08



ನಗರದ ಹೆಬ್ಬಾಳದ ಜಿ.ಕೆ.ವಿ.ಕೆಯಲ್ಲಿ ನಡೆಯುತ್ತಿರುವ ಕೃಷಿ ಮೇಳದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಭಾಗವಹಿಸಿ ವಿವಿಯ ತೋಟದಲ್ಲಿ ಬೆಳೆದಿರುವ ಸೂರ್ಯಕಾಂತಿ ಹೂಗಳನ್ನು ವೀಕ್ಷಿಸಿದರು. ಸಚಿವ ಎನ್. ಚೆಲುವರಾಯಸ್ವಾಮಿ ಇದ್ದಾರೆ.

Drought-hit farmers in State lost crops worth ₹33,000 crore: CM

He was addressing a packed audience at the inaugural of Krishi Mela 2023 on Gandhi Krishi Vigyana Kendra campus

The Hindu Bureau
BENGALURU

Farmers in Karnataka have incurred crop and harvest losses of a whopping ₹33,000 crore so far this year due to drought, erratic weather conditions, and other vagaries of nature, said Chief Minister Siddaramaiah here on Friday.

He was addressing a packed audience of agri fraternity comprising farmers, agri/horti scientists, and students of agriculture and horticulture at the inaugural of Krishi Mela 2023 on Gandhi Krishi Vigyana Kendra (GKVK) campus at Yelahanka in the city.

Of the losses, farmers could be compensated only up to ₹17,000 crore and therefore the net loss of farmers due to drought and subsequent crop losses has been ₹16,000 crore, he further said.

Commenting on the economics of farming, Mr. Siddaramaiah stated farming has to be made profitable and economically viable and that was the only way to retain farmers on their farms.

"Today, young children of farmers do not want to pursue farming and are aspiring to leave their farms for cities. We should make agriculture an attractive field for all. The University of Agriculture Sciences has a critical role to play in this context," he insisted. He said agriculture universities are no more mills that produce agriculture graduates year after year, but should be R&D centres and innovation hubs that developed newer, drought and pest resistant varieties of crop. "Developing robust crop varieties are important especially when our State has been facing drought in every 4 to 5 years gap," Mr. Siddaramaiah observed.

Speaking on the occasion, Deputy Chief Minister D.K. Shivakumar said farmers in Chickballapur, Kolar, Ramanagara, and Bengaluru Rural districts were very progressive and growing their crops with limited availability of water. They were also exporting their produce to other states and thereby increasing their incomes. Our farmers in other districts too should learn how to use water judiciously, he said.

Awards

Five farmers and one agri scientist were recognised for their work at Krishi Mela under various categories. The farmers were Manjunath B.R., Rajendra H.T., Manjegowda B.G., B.P. Vasu, and Ratnamama A.V. M.A. Dhananjay, Principal Scientist at IIHR, was recognised as best agri scientist.

The opening day of the four-day Krishi Mela received over 1.31 lakh visitors and visitations are expected to cross 2 lakh on Saturday and Sundays. It closes on Monday.







Visitors at the Krishi Mela on GKVK campus in Bengaluru on Friday. SUDHAKARA JAIN

18-11-2023
Hindu - Pg 04